# ಅಧಿಸೂಚನೆ

**ಸಂಖ್ಯೆ: ಕೆಇಆರ್‌ಸಿ/ಸಿಓಎಸ್/ತಾಂ/ಡಿಡಿಡಿ/05/20-21/976, ಬೆಂಗಳೂರು. ದಿನಾಂಕ 11.12.2020**

**ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳು (ಸಿಓಎಸ್) (ಒಂಭತ್ತನೇ ತಿದ್ದುಪಡಿ), 2020, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹನ್ನೊಂದನೇ ತಿದ್ದುಪಡಿ) ವಿನಿಯಮಗಳು, 2020 ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿ) (ಎರಡನೇ ತಿದ್ದುಪಡಿ) ವಿನಿಯಮಗಳು, 2020.**

## ಪ್ರಸ್ತಾವನೆ

ವಿದ್ಯುಚ್ಛಕ್ತಿ ಅಧಿನಿಯಮ 2003 ರ ಪರಿಚ್ಛೇದ 16 ರ ಅನುಸಾರ (2003 ರ ಕೇಂದ್ರದ ಅಧಿನಿಯಮ ಸಂಖ್ಯೆ 36) ಪ್ರದತ್ತವಾದ ಅಧಿಕಾರದಿಂದ ಕರ್ನಾಟಕ ರಾಜ್ಯದಲ್ಲಿ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳನ್ನು (ಸಿಓಎಸ್) ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ 17ನೇ ಜೂನ್ 2006 ರಂದು ಅಧಿಸೂಚಿಸಲಾಯಿತು ಮತ್ತು ತರುವಾಯ ಎಂಟು (8) ತಿದ್ದುಪಡಿಗಳನ್ನು ಕಾಲಕಾಲಕ್ಕೆ ನೀಡಲಾಯಿತು.

ವಿದ್ಯುಚ್ಛಕ್ತಿ ಅಧಿನಿಯಮ 2003 ರ ಪರಿಚ್ಛೇದ 181 ರ ಜೊತೆಗೆ ಪರಿಚ್ಛೇದ 46 ರ ಅನುಸಾರ ಓದಲಾಗುವ (2003 ರ ಕೇಂದ್ರದ ಅಧಿನಿಯಮ ಸಂಖ್ಯೆ 36) ಪ್ರದತ್ತವಾದ ಅಧಿಕಾರದಿಂದ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳು, 2004 ನ್ನು ದಿನಾಂಕ 16.12.2004ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಅಧಿಸೂಚಿಸಲಾಯಿತು ಮತ್ತು ತರುವಾಯ ಹತ್ತು (10) ತಿದ್ದುಪಡಿಗಳನ್ನು ಕಾಲಕಾಲಕ್ಕೆ ನೀಡಲಾಯಿತು.

ವಿದ್ಯುತ್ ಅಧಿನಿಯಮ 2003 ರ ಪರಿಚ್ಛೇದ 181 ರ ಜೊತೆಗೆ ಪರಿಚ್ಛೇದ 47 ರ ಅನುಸಾರ ಓದಲಾಗುವ (2003 ರ ಕೇಂದ್ರದ ಅಧಿನಿಯಮ ಸಂಖ್ಯೆ 36) ಪ್ರದತ್ತವಾದ ಅಧಿಕಾರದಿಂದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿ) ವಿನಿಯಮಗಳು, 2007 ನ್ನು ದಿನಾಂಕ 11.10.2007 ರಂದು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಲಾಯಿತು ಮತ್ತು ತರುವಾಯ ಒಂದು (1) ತಿದ್ದುಪಡಿಯನ್ನು ನೀಡಲಾಗಿದೆ.

ಆದರೆ, ಕರ್ನಾಟಕ ರಾಜ್ಯದಲ್ಲಿನ ವಿದ್ಯುತ್ ಪರವಾನಿಗೆದಾರರ ಸರಬರಾಜು ನಿಬಂಧನೆಗಳು (ಸಿಓಎಸ್) ಖಂಡಿಕೆ 46 ರ ಅಡಿಯಲ್ಲಿ ವಿತರಣಾ ಪರವಾನಿಗೆದಾರರಾದ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಆಯೋಗದ ಮುಂದೆ ಓ.ಪಿ. 21/2020

ಅರ್ಜಿಯನ್ನು ಸಲ್ಲಿಸಿದೆ. ಅರ್ಜಿಯಲ್ಲಿ, ಬೆಸ್ಕಾಂ, ವಿಶ್ವ ಬ್ಯಾಂಕಿನ ಪ್ರಸ್ತಾವನೆಯ ಮೇರೆಗೆ ದೇಶದ ಶ್ರೇಯಾಂಕದ ಕಾರ್ಯವಿಧಾನ "ವ್ಯಾಪಾರ ಮಾಡುವ ಸುಲಭತೆ (EODB) 2021" ರಲ್ಲಿ ದೇಶದ ಕಾರ್ಯಕ್ಷಮತೆಯನ್ನು ಅಳೆಯುವ ಹತ್ತು ನಿಯತಾಂಕಗಳು, "ವಿದ್ಯುತ್ ಪಡೆಯುವಿಕೆ" ಯನ್ನು ಒಳಗೊಂಡಂತೆ ಕೆಳಗಿನ ನಿಯತಾಂಕಗಳನ್ನು ಆಧರಿಸಿ ಬೆಂಗಳೂರನ್ನೂ ಸಹ ಸೇರಿಸುವ ಉದ್ದೇಶದಿಂದ ಮತ್ತು ದೆಹಲಿ ಹಾಗೂ ಮುಂಬೈಗೆ ಸಮನಾಗಿ ಬೆಂಗಳೂರು ನಗರದಲ್ಲಿ ವ್ಯಾಪಾರದ ಸರಳೀಕರಣ (ಈ.ಓ.ಡಿ.ಬಿ. - ಈಸ್ ಆಫ್ ಡೂಯಿಂಗ್ ಬ್ಯುಸಿನೆಸ್) ಸುಧಾರಿಸಲು ಇಂಧನ ಸಚಿವಾಲಯ, ಭಾರತ ಸರ್ಕಾರ ಉತ್ಸಾಹವನ್ನು ವ್ಯಕ್ತಪಡಿಸಿರುವುದಾಗಿ ತಿಳಿಸಿದೆ:

'ವ್ಯಾಪಾರದ ಸರಳೀಕರಣ (EODB) 2021' ರನ್ವಯ "ವಿದ್ಯುತ್ ಪಡೆಯುವಿಕೆ" ಒಳಗೊಂಡಂತೆ, ಈ ಕೆಳಗಿನ ಹತ್ತು ಮಾನದಂಡಗಳಿಗೆ ಸಂಬಂಧಿಸಿದಂತೆ ದೇಶದ ಕಾರ್ಯಕ್ಷಮತೆಯನ್ನು ಮೌಲ್ಯಮಾಪನ ಮಾಡುವ ನಿಟ್ಟಿನಲ್ಲಿ, ದೇಶದ ಶ್ರೇಯಾಂಕ ಕಾರ್ಯವಿಧಾನದಲ್ಲಿ ಬೆಂಗಳೂರನ್ನು ಸೇರಿಸುವ ವಿಶ್ವ ಬ್ಯಾಂಕ್ ನ ಪ್ರಸ್ತಾಪಕ್ಕೆ ಅನುಗುಣವಾಗಿ ಭಾರತ ಸರ್ಕಾರದ ವಿದ್ಯುತ್ ಸಚಿವಾಲಯವು ದೆಹಲಿ ಮತ್ತು ಮುಂಬೈಗೆ ಸಮಾನವಾಗಿ ಬೆಂಗಳೂರು ನಗರದಲ್ಲಿ ವ್ಯಾಪಾರದ ಸರಳೀಕರಣ (ಇಒಡಿಬಿ) ಸುಧಾರಿಸಲು ತನ್ನ ಉತ್ಸುಕತೆಯನ್ನು ವ್ಯಕ್ತಪಡಿಸಿದೆ ಎಂದು ಬೆಸ್ಕಾಂ ಅರ್ಜಿಯಲ್ಲಿ ತಿಳಿಸಿದೆ. ನಿಯತಾಂಕಗಳು:

1. ಹೊಸ ವಿದ್ಯುತ್ ಸಂಪರ್ಕ ಪಡೆಯಲು ಪೂರ್ಣಗೊಳಿಸಬೇಕಾದ ವಿಧಾನ
2. ಹೊಸ ವಿದ್ಯುತ್ ಸಂಪರ್ಕ ಪಡೆಯಲು ಬೇಕಾದ ಸಮಯ
3. ಹೊಸ ಸಂಪರ್ಕ ಪಡೆಯಲು ಬೇಕಾದ ಮೊತ್ತ
4. ವಿದ್ಯುತ್ ಸರಬರಾಜಿನ ವಿಶ್ವಾಸಾರ್ಹತೆ ಮತ್ತು ದರ ಸೂಚ್ಯಂಕದ ಪಾರದರ್ಶಕತೆ

ವ್ಯಾಪಾರದ ಸರಳೀಕರಣ (ಈ.ಓ.ಡಿ.ಬಿ) ಸೂಚ್ಯಂಕದ ಸಲುವಾಗಿ ವಿಶ್ವ ಬ್ಯಾಂಕ್ ಮೌಲ್ಯಮಾಪನ ಮಾಡುವ ಹತ್ತು ನಿಯತಾಂಕಗಳಲ್ಲಿ "ವಿದ್ಯುತ್ ಪಡೆಯುವಿಕೆ" ಯು ಒಂದಾಗಿರುವುದರಿಂದ ಮತ್ತು ಭಾರತದ ವ್ಯಾಪಾರದ ಸರಳೀಕರಣ (ಈ.ಓ.ಡಿ.ಬಿ) ಅಂಕಗಳನ್ನು ನಿರ್ಧರಿಸಲು ಬೆಂಗಳೂರು ನಗರವನ್ನು ದೇಶದ ಶ್ರೇಯಾಂಕದ ಕಾರ್ಯವಿಧಾನದಲ್ಲಿ ಸೇರಿಸಲು ಉದ್ದೇಶಿಸಲಾಗಿರುವುದರಿಂದ, ಸುಧಾರಣೆಗಳು ಮತ್ತು ಕಾರ್ಯವಿಧಾನವನ್ನು ನಿಗದಿತ ಸಮಯದೊಳಗೆ ಕಾರ್ಯಗತಗೊಳಿಸಲು ಕರ್ನಾಟಕ ಸರ್ಕಾರವು ಈ ಕೆಳಗಿನ ವಿಷಯಗಳ ಕುರಿತು ಬೆಸ್ಕಾಂಗೆ ನಿರ್ದೇಶನ ನೀಡಿದೆ:

- ದಾರಿಯ ಹಕ್ಕು (ರೈಟ್ ಆಫ್ ವೇ) (ಆರ್ಒಡಬ್ಲ್ಯೂ) ಅನುಮತಿಗಳ ಅವಶ್ಯಕತೆ ಇಲ್ಲದಿದ್ದಲ್ಲಿ 07 ದಿನಗಳ ಒಳಗೆ, ಆರ್ಒಡಬ್ಲ್ಯೂನ ಅನುಮತಿಯ ಅವಶ್ಯಕತೆ ಇದ್ದಲ್ಲಿ

15 ದಿನಗಳ ಒಳಗೆ 150ಕೆವಿಎ ವರೆಗೂ ಎಲ್‌ಟಿ ಆಧಾರದ ಮೇಲೆ ವಿದ್ಯುತ್ (ಬಿಬಿಎಂಪಿ/ಕೆಪಿಡಬ್ಲ್ಯೂಯಡಿ/ಇತರೆ ನಾಗರೀಕ ಪ್ರಾಧಿಕಾರಗಳು ಆರ್‌ಒಡಬ್ಲ್ಯೂಗೆ 07 ದಿನಗಳ ಒಳಗೆ ಅನುಮತಿಯನ್ನು ನೀಡಿದರೆ) ಪೂರೈಕೆ ವ್ಯವಸ್ಥೆಯನ್ನು ಪ್ರಾರಂಭಿಸಲು ಕ್ರಮ ತೆಗೆದುಕೊಳ್ಳುವುದು.

- ಸಮಾಪನ ವರದಿ, ಸಿ.ಇ.ಐ.ಜಿ ಅನುಮೋದನೆಗಳು, ಲಿಫ್ಟ್ ಮತ್ತು ಅಗ್ನಿಶಾಮಕ ಧೃಢೀಕರಣ ಪ್ರಮಾಣಪತ್ರಗಳು, ಇತ್ಯಾದಿಗಳ ಬದಲಿಗೆ ಸ್ವಯಂ ಘೋಷಣಾ ಪತ್ರಗಳನ್ನು ಜಾರಿಗೆ ತರುವುದು.
- 150 ಕೆವಿಎ ವರೆಗೆ ಹೊಸ ವಿದ್ಯುತ್ ಸಂಪರ್ಕವನ್ನು ಒದಗಿಸಲು ವ್ಯಾಪಾರದ ಸರಳೀಕರಣ (ಈ.ಓ.ಡಿ.ಬಿ) ಹಾದಿಯಲ್ಲಿ ಶೀಘ್ರ ಮಾರ್ಗ ಕಾರ್ಯವಿಧಾನವನ್ನು ಅಳವಡಿಸಿಕೊಳ್ಳುವುದು.
- ಗ್ರಾಹಕರಿಗೆ ಸ್ವಯಂ ಕಾರ್ಯನಿರ್ವಹಣೆ ಅಥವಾ ಠೇವಣಿ ಪಾವತಿ ಕಾರ್ಯಗಳ (Deposit Contribution Work – DCW) ಆಯ್ಕೆಗಳನ್ನು ನೀಡುವುದರ ಮೂಲಕ 3 ದಿನಗಳ ಒಳಗೆ ಅಗತ್ಯವಾದ ಮೂಲಸೌಕರ್ಯಗಳನ್ನು ರಚಿಸಿ ಕೆಲಸವನ್ನು ಅಭಿವೃದ್ಧಿಪಡಿಸಿ ಕಾರ್ಯಗತಗೊಳಿಸುವುದು.
- ಅರ್ಜಿಯ ನೋಂದಣಿ ಸಮಯದಲ್ಲಿಯೇ ಆರಂಭಿಕ ಭದ್ರತಾ ಠೇವಣಿ (ಐಎಸ್‌ಡಿ), ಮೀಟರ್ ಭದ್ರತಾ ಠೇವಣಿ (ಎಂಎಸ್‌ಡಿ), ಠೇವಣಿ ಪಾವತಿ ಕಾರ್ಯಗಳು ಇತ್ಯಾದಿಗೆ ನಿರ್ಧರಿಸಲಾದ ಪ್ರಮಾಣಿತ ಶುಲ್ಕಗಳನ್ನು ಪಾವತಿಸಲು ಅನುಮತಿಸುವುದು.

ಬೆಸ್ಕಾಂ, ಈ ಮೇಲೆ ತಿಳಿಸಿರುವ ಅರ್ಜಿಯ ಮೂಲಕ ಕೆಳಕಂಡ ವಿವಿಧ ಷರತ್ತುಗಳಿಗೆ ತಿದ್ದುಪಡಿ ಮಾಡಲು ಕೋರಿದೆ:

i) ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳು (ಸಿಓಎಸ್), 2006 ರ 3.02(ಬಿ), 3.02(ಸಿ), 9.09(ಇ), 9.09(ಎಫ್), 29.04(ಎ), 29.04(ಎ)(1), 29.04(ಎ)(2). ವಿದ್ಯುತ್ ಸರಬರಾಜು ಷರತ್ತುಗಳಿಗೆ (ಸಿಓಎಸ್) ಹೊಸ ಷರತ್ತು 4.10ನ್ನು ಮತ್ತು ಹೊಸ ಅನುಬಂಧ-12ನ್ನು ಸೇರಿಸಲು ಬೆಸ್ಕಾಂ ಕೋರಿದೆ.

ii) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳು, 2004ರ (ಆರ್‌ಓಇ) 3.1.1(ಎ), 3.1.1(ಎ)ರ ಟಿಪ್ಪಣಿ (ii), (iii), (iv) ಮತ್ತು (v), 3.1.1(ಬಿ) ಮತ್ತು 3.1.1(ಬಿ) ರ ಟಿಪ್ಪಣಿ (ಬಿ) ಮತ್ತು (ಸಿ).

iii) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿ) ವಿನಿಯಮಗಳು, 2007ರ ಪರಿಚ್ಛೇದ 7(1).

ಬೆ.ವಿ.ಸ ಕಂಪನಿಯ ಅರ್ಜಿಯನ್ನು ಆಲಿಸಿದ ಆಯೋಗವು, ಈಗಾಗಲೇ ಆಯೋಗವು ಹೊರಡಿಸಿರುವ ವಿದ್ಯುತ್ ಸರಬರಾಜು ಷರತ್ತುಗಳು (ಸಿಓಎಸ್), ಆರ್‌ಓಇ ಮತ್ತು ಇತರೆ ವಿನಿಯಮಗಳು ಇಡೀ ರಾಜ್ಯಕ್ಕೆ ಏಕರೂಪವಾಗಿ ಅನ್ವಯಿಸುವುದರಿಂದ, ಎಲ್ಲಾ ವಿತರಣಾ ಪರವಾನಿಗೆದಾರರನ್ನು, ಅರ್ಜಿಯಲ್ಲಿ ಅಳವಡಿಸುವಂತೆ ನಿರ್ದೇಶಿಸಿ ಅರ್ಜಿಯನ್ನು ಅಂಗೀಕರಿಸಿತು. ಎಲ್ಲಾ ವಿತರಣಾ ಪರವಾನಿಗೆದಾರರು EA 2003 ರ, ಪರಿಚ್ಛೇದ 94(2) ರ ಜೊತೆಗೆ ಓದಲಾದ ನಾಗರೀಕ ಕಾರ್ಯವಿಧಾನ ಸಂಹಿತೆ, 1908 ರ, ನಿಯಮ 10(2) ರ, ಆದೇಶ 1 ರ ಅಡಿಯಲ್ಲಿ ಅರ್ಜಿಗಳನ್ನು ಆಯೋಗದ ಮುಂದೆ ಓ.ಪಿ 21 / 2020 ರಲ್ಲಿ ಬೆಸ್ಕಾಂ ಕೋರಿರುವ ಬದಲಾವಣೆಗಳನ್ನು ವಿನಂತಿಸಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ.

ಆಯೋಗವು, ವಿದ್ಯುಚ್ಛಕ್ತಿ ಅಧಿನಿಯಮ 2003 ರ ಪರಿಚ್ಛೇದ 16 ರ ಅನುಸಾರ (2003 ರ ಕೇಂದ್ರದ ಅಧಿನಿಯಮ ಸಂಖ್ಯೆ 36) ಮತ್ತು ಸಿಓಎಸ್‌ನ (46) ನೇ ಖಂಡದಂತೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಮೇಲೆ ಸೂಚಿಸಿರುವ ವಿನಿಯಮಗಳ ವಿವಿಧ ಷರತ್ತುಗಳನ್ನು ತಿದ್ದುಪಡಿ ಮಾಡಲು ಈ ಮೂಲಕ ಪ್ರಸ್ತಾಪಿಸಿದೆ.

ಆದ್ದರಿಂದ, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ಸರಬರಾಜು ಷರತ್ತುಗಳು (ಸಿಓಎಸ್) (ಒಂಭತ್ತನೇ ತಿದ್ದುಪಡಿ), 2020, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹನ್ನೊಂದನೇ ತಿದ್ದುಪಡಿ) ವಿನಿಯಮಗಳು 2020 ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿ) (ಎರಡನೇ ತಿದ್ದುಪಡಿ) ವಿನಿಯಮಗಳು, 2020 ಎಂದು ಕರೆಯುವುದಾಗಿ ಪ್ರಸ್ತಾಪಿಸಿದ ತಿದ್ದುಪಡಿಗಳ ಕರಡುಗಳನ್ನು ದಿನಾಂಕ 22.10.2020 ರಂದು ಕರ್ನಾಟಕ ರಾಜ್ಯ ಪತ್ರದಲ್ಲಿ ಅಧಿಸೂಚನೆ ಸಂಖ್ಯೆ: ಕೆಇಆರ್‌ಸಿ/ಸಿಓಎಸ್/ಡಿಡಿಡಿ/05/20-21/630, ಬೆಂಗಳೂರು, ದಿನಾಂಕ: 12.10.2020 ರ ಮೂಲಕ ಪ್ರಕಟಿಸಿ, ಅದು ಪ್ರಕಟವಾದ 30 ದಿನಗಳೊಳಗೆ ಭಾಗೀದಾರರಿಂದ ಪ್ರತಿಕ್ರಿಯೆಗಳು / ಅಭಿಪ್ರಾಯಗಳು / ಸಲಹೆಗಳು / ಆಕ್ಷೇಪಣೆಗಳನ್ನು ಆಹ್ವಾನಿಸಲಾಯಿತು. ಆಯೋಗದ ವೆಬ್ ಸೈಟ್ https://karunadu.karnataka.gov.in/kerc ನಲ್ಲಿಯೂ ತಿದ್ದುಪಡಿಗಳ ಕರಡು ಪ್ರತಿಗಳನ್ನು ಲಭ್ಯವಿರಿಸಿ ಮತ್ತು ಇದನ್ನು ತಿಳಿಸುವ ಪ್ರಕಟಣೆಯನ್ನು ದಿನಪತ್ರಿಕೆಗಳಲ್ಲಿ ಸಾರ್ವಜನಿಕರ / ಆಸಕ್ತರ ಮಾಹಿತಿಗಾಗಿ ಪ್ರಕಟಿಸಲಾಯಿತು. ಆಯೋಗವು ಭಾಗೀದಾರರಿಂದ ಪ್ರತಿಕ್ರಿಯೆಗಳು / ಅಭಿಪ್ರಾಯಗಳು / ಸಲಹೆಗಳು / ಆಕ್ಷೇಪಣೆಗಳನ್ನು ಸ್ವೀಕರಿಸಲಾಯಿತು. ಆಯೋಗವು

ಪ್ರಚಲಿತ ಕೋವಿಡ್ – 19 ರ ಸನ್ನಿವೇಶಗಳ ಹಿನ್ನೆಲೆಯಲ್ಲಿ 'ಸಾರ್ವಜನಿಕ ವಿಚಾರಣೆ' ಯನ್ನು ನಡೆಸಿರುವುದಿಲ್ಲ.

ಅಭಿಪ್ರಾಯಗಳನ್ನು ಸಲ್ಲಿಸಿದ ಭಾಗೀದಾರರು, ವಿದ್ಯುತ್ ಸಂಪರ್ಕವನ್ನು ಪಡೆಯುವಾಗ ಸಲ್ಲಿಸಬೇಕಾದ ಕಡ್ಡಾಯ ದಾಖಲಾತಿಗಳ ಸಂಖ್ಯೆಯನ್ನು ಕಡಿತಗೊಳಿಸಲು, ಎಸ್ಕಾಂಗಳಿಗೆ ಪಾವತಿಸಬೇಕಾದ ಠೇವಣಿಯ ಬದಲು ಬ್ಯಾಂಕ್ ಗ್ಯಾರಂಟಿಯನ್ನು ಪರಿಗಣಿಸಲು, ವಿದ್ಯುತ್ ಸರಬರಾಜು ವ್ಯವಸ್ಥೆಗಾಗಿ ಅಭಿವೃದ್ಧಿ ಪಡಿಸಲಾಗುವ ಮೂಲಸೌಕರ್ಯಗಳ ವೆಚ್ಚವನ್ನು ಎಸ್ಕಾಂಗಳೇ ಭರಿಸಲು ಮತ್ತು ಕೋವಿಡ್-19 ಪ್ರಕ್ರಿಯೆಗಳು ಕಡಿಮೆಯಾದ ನಂತರ "ಸಾರ್ವಜನಿಕ ವಿಚಾರಣೆ" ಯನ್ನು ನಡೆಸುವ ಬಗ್ಗೆ ಕಳಕಳಿಯನ್ನು ವ್ಯಕ್ತಪಡಿಸಿದ್ದಾರೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು, ಭಾಗೀದಾರರಿಂದ ಪ್ರತಿಕ್ರಿಯೆಗಳು / ಅಭಿಪ್ರಾಯಗಳು / ಸಲಹೆಗಳು / ಆಕ್ಷೇಪಣೆಗಳನ್ನು ಪರಿಗಣಿಸಿದ ನಂತರ, 2003ರ ವಿದ್ಯುಚ್ಛಕ್ತಿ ಅಧಿನಿಯಮ (2003ರ ಕೇಂದ್ರ ಅಧಿನಿಯಮ ಸಂಖ್ಯೆ 36) ದ, ಪರಿಚ್ಛೇದ 16, ಪರಿಚ್ಛೇದ 43ರ ಉಪ ಪರಿಚ್ಛೇದ (2), ಪರಿಚ್ಛೇದ 46 ಮತ್ತು ಪರಿಚ್ಛೇದ 47 ರ ಜೊತೆಗೆ ಓದಲಾದ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳ ಖಂಡ (46) ರಡಿ ಪ್ರದತ್ತವಾದ ಅಧಿಕಾರ ಹಾಗೂ ಈ ಸಂಬಂಧ ದತ್ತವಾದ ಎಲ್ಲಾ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಗಿದಾರರ ಸರಬರಾಜು ಷರತ್ತುಗಳು (ಸಿಓಎಸ್) 2006, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳು, 2004 ಮತ್ತು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿ) ವಿನಿಯಮಗಳು, 2007 ಕ್ಕೆ ಮತ್ತಷ್ಟು ತಿದ್ದುಪಡಿಗಳನ್ನು ಈ ಕೆಳಗಿನಂತೆ ಮಾಡಿರುತ್ತದೆ:

## 1. ಶೀರ್ಷಿಕೆ ಮತ್ತು ಪ್ರಾರಂಭ:

a) ಈ ಷರತ್ತುಗಳನ್ನು,

i) ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ಸರಬರಾಜು ಷರತ್ತುಗಳು (ಸಿಓಎಸ್) (ಒಂಭತ್ತನೇ ತಿದ್ದುಪಡಿ), 2020,

ii) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) (ಹನ್ನೊಂದನೇ ತಿದ್ದುಪಡಿ) ವಿನಿಯಮಗಳು 2020 ಮತ್ತು

iii) ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿ) (ಎರಡನೇ ತಿದ್ದುಪಡಿ) ವಿನಿಯಮಗಳು, 2020

ಎಂಬುದಾಗಿ ಕರೆಯಬಹುದಾಗಿರುತ್ತದೆ.

b) ಈ ಷರತ್ತುಗಳು, ಕರ್ನಾಟಕ ರಾಜ್ಯದ ಅಧಿಕೃತ ರಾಜ್ಯಪತ್ರದಲ್ಲಿ ಪ್ರಕಟಗೊಂಡ ದಿನಾಂಕದ ನಂತರ ಜಾರಿಗೆ ಬರಲಿದೆ.

c) ಈ ಷರತ್ತುಗಳು, ಕರ್ನಾಟಕ ರಾಜ್ಯದಲ್ಲಿನ ವಿದ್ಯುಚ್ಛಕ್ತಿ ವಿತರಣಾ ವ್ಯವಹಾರದಲ್ಲಿ ತೊಡಗಿರುವ ಎಲ್ಲಾ ಪರವಾನಿಗೆದಾರರಿಗೆ ಮತ್ತು ವಿದ್ಯುಚ್ಛಕ್ತಿ ಬಳಕೆದಾರರಿಗೆ ಅನ್ವಯಿಸುತ್ತದೆ.

**2. ಕೆಲವು ಷರತ್ತುಗಳ ತಿದ್ದುಪಡಿ:**

i) **2006 ರ, ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುಚ್ಛಕ್ತಿ ಸರಬರಾಜು ಷರತ್ತುಗಳಲ್ಲಿನ, ಕೆಳಗಿನ ಕೋಷ್ಟಕದ ಕಲಂ-2 ರಲ್ಲಿ ಉಲ್ಲೇಖಿಸಲಾದ ಅಸ್ತಿತ್ವದಲ್ಲಿರುವ ಷರತ್ತುಗಳನ್ನು ಕಲಂ-3 ರಲ್ಲಿ ಉಲ್ಲೇಖಿಸಲಾದ ಷರತ್ತುಗಳಂತೆ ಬದಲಿಸಬೇಕು**:

| 1 | 2 | 3 |
|---|---|---|
| **ಷರತ್ತು ಸಂ.** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| **3.02**<br>**3.02 (ಬಿ)** | **ಸರಬರಾಜಿನ ವರ್ಗೀಕರಣ**<br>**400 ವೋಲ್ಟ್ಸ್, 3ಫೇಸ್‌ನಲ್ಲಿ**<br>ಅನುಮೋದಿತ ಹೊರೆ 50 ಕೆ.ಡಬ್ಲ್ಯೂ (67 ಹೆಚ್‌ಪಿ / 59 ಕೆವಿಎ) ಗಿಂತ ಕಡಿಮೆ ಇರುವ ಎಲ್ಲಾ ಸ್ಥಾಪನೆಗಳು (ಲೈಟಿಂಗ್ ಹೊರೆ ಒಳಗೊಂಡಂತೆ)<br><br>**ಗಮನಿಸಿ**: ಗ್ರಾಹಕನು ಕೋರಿರುವ ಹೊರೆ 50 ಕೆಡಬ್ಲ್ಯೂ ಗಿಂತ ಕಡಿಮೆಯಿದ್ದರೂ, ಸ್ವತಃ ಅಧಿಕ ವಿದ್ಯುತ್ ಒತ್ತಡದಲ್ಲಿ (HT) ಸರಬರಾಜನ್ನು ಪಡೆಯುವ ಆಯ್ಕೆಯನ್ನು ಹೊಂದಿರುತ್ತಾನೆ. ಅಂತಹ ಸಂದರ್ಭದಲ್ಲಿ ಕನಿಷ್ಠ ಒಪ್ಪಂದದ ಬೇಡಿಕೆ (ಸಿ.ಡಿ) 25 ಕೆವಿಎ ಆಗಿರಬೇಕು. | **ಸರಬರಾಜಿನ ವರ್ಗೀಕರಣ**<br>**400 ವೋಲ್ಟ್ಸ್, 3ಫೇಸ್‌ನಲ್ಲಿ**<br>ಅನುಮೋದಿತ ಹೊರೆ **150 ಕೆ.ಡಬ್ಲ್ಯೂ (201 ಹೆಚ್‌ಪಿ / 176 ಕೆವಿಎ**) ಗಿಂತ ಕಡಿಮೆ ಇರುವ ಎಲ್ಲಾ ಸ್ಥಾಪನೆಗಳು (ಲೈಟಿಂಗ್ ಹೊರೆ ಒಳಗೊಂಡಂತೆ)<br><br>**ಆದಾಗ್ಯೂ, ತಾತ್ಕಾಲಿಕ ಸ್ಥಾಪನೆಗಳಿಗೆ ಸಂಬಂಧಿಸಿದಂತೆ 400ವೋಲ್ಟ್ಸ್, 3 ಫೇಸ್‌ನಲ್ಲಿ ಗರಿಷ್ಠ 50 ಕೆಡಬ್ಲ್ಯೂ / 59ಕೆವಿಎ / 67 ಹೆಚ್‌ಪಿ ವರೆಗೆ ವಿದ್ಯುತ್ ಸರಬರಾಜಿನ ವ್ಯವಸ್ಥೆ ಕಲ್ಪಿಸುವುದು.**<br><br>**ಗಮನಿಸಿ**: ಗ್ರಾಹಕನು ಕೋರಿರುವ ಹೊರೆ 150 ಕೆಡಬ್ಲ್ಯೂ ಗಿಂತ ಕಡಿಮೆಯಿದ್ದರೂ, ಸ್ವತಃ ಅಧಿಕ ವಿದ್ಯುತ್ ಒತ್ತಡದಲ್ಲಿ (HT) ಸರಬರಾಜನ್ನು ಪಡೆಯುವ ಆಯ್ಕೆಯನ್ನು ಹೊಂದಿರುತ್ತಾನೆ. ಅಂತಹ ಸಂದರ್ಭದಲ್ಲಿ ಕನಿಷ್ಠ ಒಪ್ಪಂದದ ಬೇಡಿಕೆ (ಸಿ.ಡಿ) 25 ಕೆವಿಎ ಆಗಿರಬೇಕು. |
| **3.02 (ಸಿ)** | ಹೆಚ್‌ಟಿ ಸರಬರಾಜು, 3 ಫೇಸ್‌ನಲ್ಲಿ, 50 c/s<br>11/13.2 ಕೆವಿ, ಆ ಪ್ರದೇಶದಲ್ಲಿ ಲಭ್ಯವಿರುವಂತೆ.<br><br>ಎಲ್ಲಾ ಸ್ಥಾವರಗಳ ಒಪ್ಪಂದದ ಬೇಡಿಕೆಯು 50 ಕೆಡಬ್ಲ್ಯೂ / 59 ಕೆವಿಎ ಮತ್ತು ಮೇಲಿನ ಮತ್ತು 2000 ಕೆವಿಎ ಒಳಗೊಂಡಂತೆ. | ಹೆಚ್‌ಟಿ ಸರಬರಾಜು, 3 ಫೇಸ್‌ನಲ್ಲಿ, 50 c/s<br>11/13.2 ಕೆವಿ, ಆ ಪ್ರದೇಶದಲ್ಲಿ ಲಭ್ಯವಿರುವಂತೆ.<br><br>ಎಲ್ಲಾ ಸ್ಥಾವರಗಳ ಒಪ್ಪಂದದ ಬೇಡಿಕೆಯು 150 ಕೆಡಬ್ಲ್ಯೂ / 176 ಕೆವಿಎ ಮೀರಿದ ಮತ್ತು 2000 ಕೆವಿಎ ಒಳಗೊಂಡಂತೆ.<br><br>**ಎಲ್ಲಾ ತಾತ್ಕಾಲಿಕ ಸ್ಥಾಪನಗಳಿಗೆ, 50 ಕೆಡಬ್ಲ್ಯೂ / 59 ಕೆವಿಎ / 67 ಹೆಚ್‌ಪಿಗೂ ಅಧಿಕ ಒಪ್ಪಂದದ ಬೇಡಿಕೆ ಮತ್ತು 2000 ಕೆವಿಎ ಮೀರದಂತೆ.** |

| 1 | 2 | 3 |
|---|---|---|
| **ಷರತ್ತು ಸಂ.** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| **4.10** | **ಹೊಸದು** | **ವ್ಯಾಪಾರದ ಸರಳೀಕರಣದ ಅಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಒದಗಿಸಲು ಬೇಕಾದ ಮಾನದಂಡಗಳು:**<br>1. **ಕಾಲಕಾಲಕ್ಕೆ ಕರ್ನಾಟಕ ಸರ್ಕಾರ ಅಧಿಸೂಚಿಸುವ ನಗರಗಳಿಗೆ ಅನ್ವಯಿಸುವುದು.**<br>2. **ಆವರಣದಲ್ಲಿ ಒಂದೇ ಸ್ಥಾಪನವಿದ್ದಲ್ಲಿ ಮಾತ್ರ ವಿದ್ಯುತ್ ಸರಬರಾಜನ್ನು ಒದಗಿಸುವುದಕ್ಕೆ ಅನ್ವಯಿಸುತ್ತದೆ.**<br>3. **ವಿದ್ಯಾ ಸಂಸ್ಥೆಗಳು, ಆಸ್ಪತ್ರೆ, ಗೋದಾಮು, ವಾಣಿಜ್ಯ, ಇವಿ ಚಾರ್ಜಿಂಗ್ ಸ್ಟೇಷನ್, ಶಾಶ್ವತ ಆಧಾರದ ಕೈಗಾರಿಕೆಗಳು ಈ ಗ್ರಾಹಕರ ವರ್ಗಕ್ಕೆ ಅನ್ವಯಿಸುತ್ತದೆ.**<br>4. **50 ಕೆಡಬ್ಲ್ಯೂ ಮತ್ತು ಅದಕ್ಕಿಂತ ಹೆಚ್ಚಿನ 150 ಕಿ.ವ್ಯಾ. ಒಳಗೊಂಡಂತೆ ಇರುವ ವಿದ್ಯುತ್ ಪೂರೈಕೆಯನ್ನು ಬಯಸುವ ನಿರೀಕ್ಷಿತ ಗ್ರಾಹಕರಿಗೆ ಅನ್ವಯಿಸುವುದಾಗಿದ್ದು, ಅವರಿಗೆ 400 ವೋಲ್ಟ್, 3 ಫೇಸ್‌ನಲ್ಲಿ ವಿದ್ಯುತ್ ಪೂರೈಕೆ ವ್ಯವಸ್ಥೆ ಮಾಡಬಹುದು. ಬೇಡಿಕೆಯ ಲೋಡ್ 50 ಕೆಡಬ್ಲ್ಯೂ ಮತ್ತು 150 ಕೆಡಬ್ಲ್ಯೂ ನಡುವೆ ಇದ್ದರೂ ಸಹ ಗ್ರಾಹಕರು ಹೈಟೆನ್ಷನ್ ನಲ್ಲಿ ಪೂರೈಕೆಯನ್ನು ಪಡೆಯುವ ಆಯ್ಕೆಯನ್ನು ಹೊಂದಿರುತ್ತಾರೆ.**<br>5. **ಲಭ್ಯವಿರುವ ಹತ್ತಿರದ ಮೂಲದಿಂದ ಅನುಸ್ಥಾಪನೆಯ ಸ್ಥಳಕ್ಕೆ ಗರಿಷ್ಠ 500 ಮೀಟರ್ ಗಳ ಮಾರ್ಗದ ವಿಸ್ತರಣೆಯ ಅಗತ್ಯವಿರುವ ಅನುಸ್ಥಾಪನಕ್ಕೆ ಅನ್ವಯಿಸುತ್ತದೆ.**<br>6. **ವ್ಯಾಪಾರದ ಸರಳೀಕರಣದ (ಈ.ಡಿ.ಓ.ಬಿ) ಅಡಿಯಲ್ಲಿ ವಿದ್ಯುತ್ ಸಂಪರ್ಕ ಕೋರುವ ಅರ್ಜಿದಾರನು ಕಡ್ಡಾಯವಾಗಿ ಸಲ್ಲಿಸಬೇಕಾದ ದಾಖಲಾತಿಗಳು:**<br>**ಎ) ಗುರುತಿನ ಆಧಾರ**<br>**ಬಿ) ಮಾಲೀಕತ್ವದ ಪುರಾವೆ**<br>**ಸಿ) ವಾಸ ಪ್ರಮಾಣಪತ್ರ (ಓಸಿ)**<br>7. **ಅರ್ಜಿದಾರರು ಈ ಕೆಳಗಿನ ದಾಖಲೆಗಳಿಗಾಗಿ ವಿದ್ಯುತ್ ಸರಬರಾಜು ಷರತ್ತುಗಳ ಅನುಬಂಧ – 12 (ಅಧಿಸೂಚನೆಗೆ ಲಗತ್ತು) ಅನುಗುಣವಾಗಿ ಅರ್ಜಿಯೊಂದಿಗೆ ಸ್ವಯಂ ಘೋಷಣೆಯನ್ನು ಆನ್‌ಲೈನ್‌ನಲ್ಲಿ ಒದಗಿಸಬೇಕು:**<br>**a) ಷರತ್ತು 4.02 ಪ್ರಕಾರ ಪಾಲುದಾರಿಕೆ ಸಂಸ್ಥೆಯಾಗಿದ್ದಲ್ಲಿ ಪಾಲುದಾರಿಕೆ ಪತ್ರ ಅಥವಾ ಸೀಮಿತ ಕಂಪನಿ/ಸೀಮಿತ ಹೊಣೆಗಾರಿಕೆ ಸಹಭಾಗಿತ್ವ ಆಗಿದ್ದಲ್ಲಿ ಒಗ್ಗೂಡಿಕೆ ಪ್ರಮಾಣ ಪತ್ರ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ ಮತ್ತು ಸಂಯೋಜನೆಯ ಪ್ರಮಾಣಪತ್ರ** |

| 1 | 2 | 3 |
|---|---|---|
| ಷರತ್ತು ಸಂ. | ಹಾಲಿ ಇರುವ ಷರತ್ತು | ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು |
| | | **b)** ಷರತ್ತು 4.06 ಪ್ರಕಾರ ಗುತ್ತಿಗೆದಾರರ ಸಮಾಪನ ಮತ್ತು ಪರೀಕ್ಷಾ ವರದಿ ಹಾಗೂ ವೈರಿಂಗ್ ರೇಖಾಚಿತ್ರ.<br>**c)** ಷರತ್ತು 4.02 ಪ್ರಕಾರ ಸೌರಜಲ ಹೀಟರ್‌ನ್ನು ಸ್ಥಾಪಿಸಿರುವ ಬಗ್ಗೆ.<br>**d)** ಷರತ್ತು 9.01 ಪ್ರಕಾರ ಮಂಜೂರಾಗಿರುವ ಕಟ್ಟಡದ ನಕ್ಷೆ.<br>**e)** ಷರತ್ತು 4.02 ಪ್ರಕಾರ ಯಾವುದೇ ಕಾನೂನಿನಡಿ ಯಾವುದೇ ವ್ಯಾಪಾರ / ವ್ಯವಹಾರ ಅಥವಾ ವೃತ್ತಿಯನ್ನು ನಡೆಸಲು ನ್ಯಾಯಸಮ್ಮತವಾದ ಪರವಾನಗಿ.<br>**f)** ಷರತ್ತು 8.03 ಪ್ರಕಾರ ಸ್ಥಾಪಿಸಲಾಗಿರುವ ಯಂತ್ರೋಪಕರಣಗಳ ನಾಮಫಲಕ ವಿವರಗಳು.<br>**g)** ಸಿಇಐಜಿ, ಲಿಫ್ಟ್, ಅಗ್ನಿಶಾಮಕ ಇಲಾಖೆ, ಮಾಲಿನ್ಯ ನಿಯಂತ್ರಣ ಮಂಡಳಿ ಇತ್ಯಾದಿಗಳಿಂದ ಇತರ ಶಾಸನಬದ್ಧ ಅನುಮೋದನೆಗಳು.<br>**h)** ಆನ್‌ಲೈನ್‌ನಲ್ಲಿ ಅರ್ಜಿಯನ್ನು ಪ್ರಕ್ರಿಯೆಗೊಳಿಸುವಾಗ, ಗ್ರಾಹಕರು ವಿದ್ಯುತ್ ಸರಬರಾಜು ಒಪ್ಪಂದದ ನಿಯಮಗಳನ್ನು ಆನ್‌ಲೈನ್‌ನಲ್ಲಿ ಒಪ್ಪಿಕೊಳ್ಳಬೇಕು. (ರೂ.200 ಮುಖಬೆಲೆಯ ಛಾಪಾ ಕಾಗದದ ಮೇಲೆ ಕಾರ್ಯಗತಗೊಳಿಸಿದ ವಿದ್ಯುತ್ ಸರಬರಾಜಿನ ಒಪ್ಪಂದದ ಸ್ಕ್ಯಾನ್ ಮಾಡಿದ ಪ್ರತಿ)<br>8. ಕ್ರಮ ಸಂಖ್ಯೆ (7) ರಲ್ಲಿ ಸೂಚಿಸಿರುವ ದಾಖಲೆಗಳನ್ನು ಸೇವೆ ಪ್ರಾರಂಭವಾದ 30 ದಿನಗಳೊಳಗೆ ಆನ್‌ಲೈನ್‌ನಲ್ಲಿ ಅಪ್ ಲೋಡ್ ಮಾಡಬೇಕು, ತಪ್ಪಿದಲ್ಲಿ ಸ್ಥಾವರಕ್ಕೆ ವಿದ್ಯುತ್ ಸಂಪರ್ಕ ಕಡಿತಗೊಳಿಸಬಹುದಾಗಿರುತ್ತದೆ.<br>9. ಅರ್ಜಿದಾರನು ವಿದ್ಯುತ್ ಮಾರ್ಗ ಮತ್ತು ಸಾಮಗ್ರಿಗಳನ್ನು ಅಳವಡಿಸಲು ತಗಲುವ ವೆಚ್ಚದ ವಸೂಲಿಗೆ ಸಂಬಂಧಿಸಿದಂತೆ ಷರತ್ತು 3.1.1 (A) & (B) ನಲ್ಲಿ ವಿವರಿಸಿರುವ ಮೊತ್ತದ ಜೊತೆಗೆ, ಆರಂಭಿಕ ಭದ್ರತಾ ಠೇವಣಿ, ಮೀಟರ್ ಭದ್ರತಾ ಠೇವಣಿ ಇದ್ದಲ್ಲಿ, ಮತ್ತು ಇತರ ಶುಲ್ಕಗಳನ್ನು ಆನ್‌ಲೈನ್ ಪಾವತಿ ವಿಧಾನದ ಮೂಲಕ ಆನ್‌ಲೈನ್‌ನಲ್ಲಿ ಅರ್ಜಿಯನ್ನು ನೋಂದಾಯಿಸುವ ಸಮಯದಲ್ಲಿಯೇ ಪಾವತಿಸಬೇಕು.<br>ಆದಾಗ್ಯೂ, ಸ್ವಯಂ-ಕಾರ್ಯಗತಗೊಳಿಸುವ ಕೆಲಸಗಳ ಸಂದರ್ಭದಲ್ಲಿ ಅರ್ಜಿದಾರರು ಅಂದಾಜು ವೆಚ್ಚದ ಶೇ 10 ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ಪಾವತಿಸಬೇಕಿದ್ದು, ಅಂತಹ ಮೇಲ್ವಿಚಾರಣಾ ಶುಲ್ಕಗಳನ್ನು ಅರ್ಜಿದಾರರು, |

| 1 | 2 | 3 |
|---|---|---|
| ಷರತ್ತು ಸಂ. | ಹಾಲಿ ಇರುವ ಷರತ್ತು | ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು |
| | | **ಪರವಾನಿಗೆದಾರರು ನೀಡುವ ಮೊದಲ ವಿದ್ಯುತ್ ಬಿಲ್‌ನಲ್ಲಿ ಪಾವತಿಸಬೇಕಿರುತ್ತದೆ**.<br><br>**ಟಿಪ್ಪಣಿ:**<br>1. **2006 ರ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳು, ಮತ್ತು ಕೆ.ಇ.ಆರ್.ಸಿ (ವಿದ್ಯುತ್ ಸರಬರಾಜು ವೆಚ್ಚದ ವಸೂಲಾತಿ) ವಿನಿಯಮಗಳು, 2004 ರಲ್ಲಿನ ಇತರ ಷರತ್ತುಗಳು, ಅವುಗಳ ನಂತರದ ತಿದ್ದುಪಡಿಗಳು ಮತ್ತು ಜಾರಿಯಲ್ಲಿರುವ ಇತರ ವಿನಿಯಮಗಳನ್ನು ಅನುಪಾಲಿಸಬೇಕಿರುತ್ತದೆ.**<br>2. **ಮೇಲಿನ ಮಾನದಂಡದ ಅಡಿಯಲ್ಲಿ ಬರದೇ ಇರುವ ಅರ್ಜಿದಾರರು ಸಾಮಾನ್ಯ ಕಾರ್ಯವಿಧಾನದ ಅಡಿಯಲ್ಲಿ ವಿದ್ಯುತ್ ಸಂಪರ್ಕವನ್ನು ಪಡೆಯಬಹುದಾಗಿರುತ್ತದೆ.** |
| **9.09 (e)** | ಮಿಶ್ರ ಹೊರೆಯುಳ್ಳ ಕಟ್ಟಡಗಳಿಗೆ ಮಾಪಕ ಅಳವಡಿಕೆ<br><br>100 ಕಿಲೋ ವ್ಯಾಟ್‌ಗಿಂತ ಕಡಿಮೆ ವಿದ್ಯುತ್ ಹೊರೆಯನ್ನು ಕೋರಿರುವ ಸಂಯೋಜಿತ ವಸತಿ ಮತ್ತು ವಾಣಿಜ್ಯ ಹೊರೆ ಹೊಂದಿರುವ ಕಟ್ಟಡಗಳಿಗೆ ಎಲ್‌ಟಿ ಆಧಾರದ ಮೇಲೆ ಪ್ರತಿ ಸ್ಥಾಪನಕ್ಕೂ ಪ್ರತ್ಯೇಕ ಮಾಪಕಗಳೊಂದಿಗೆ, ಅದು ವಾಣಿಜ್ಯ ಅಥವಾ ವಸತಿ ಸ್ಥಾಪನವೆಂದು ಲೆಕ್ಕಿಸದೆ ವಿದ್ಯುತ್ ಸಂಪರ್ಕವನ್ನು ಒದಗಿಸಬಹುದಾಗಿರುತ್ತದೆ. ಅನ್ವಯವಾಗುವ ದರಪಟ್ಟಿಯಲ್ಲಿ ಬಿಲ್ಲಿಂಗ್ ಮಾಡಬೇಕಿರುತ್ತದೆ. | ಮಿಶ್ರ ಹೊರೆಯುಳ್ಳ ಕಟ್ಟಡಗಳಿಗೆ ಮಾಪಕ ಅಳವಡಿಕೆ<br><br>**150 ಕಿಲೋ ವ್ಯಾಟ್ ವರೆಗೆ ಮತ್ತು 150 ಕಿಲೋ ವ್ಯಾಟ್ ಒಳಗೊಂಡಂತೆ** ವಿದ್ಯುತ್ ಹೊರೆಯನ್ನು ಕೋರಿರುವ ಸಂಯೋಜಿತ ವಸತಿ ಮತ್ತು ವಾಣಿಜ್ಯ ಹೊರೆ ಹೊಂದಿರುವ ಕಟ್ಟಡಗಳಿಗೆ ಎಲ್‌ಟಿ ಆಧಾರದ ಮೇಲೆ ಪ್ರತಿ ಸ್ಥಾಪನಕ್ಕೂ ಪ್ರತ್ಯೇಕ ಮಾಪಕಗಳೊಂದಿಗೆ, ಅದು ವಾಣಿಜ್ಯ ಅಥವಾ ವಸತಿ ಸ್ಥಾಪನವೆಂದು ಲೆಕ್ಕಿಸದೆ ವಿದ್ಯುತ್ ಸಂಪರ್ಕವನ್ನು ಒದಗಿಸಬಹುದಾಗಿರುತ್ತದೆ. ಅನ್ವಯವಾಗುವ ದರಪಟ್ಟಿಯಲ್ಲಿ ಬಿಲ್ಲಿಂಗ್ ಮಾಡಬೇಕಿರುತ್ತದೆ. |
| **9.09 (f)** | 100 ಕಿಲೋ ವ್ಯಾಟ್‌ಗಿಂತ ಕಡಿಮೆ ವಿದ್ಯುತ್ ಹೊರೆಯನ್ನು ಕೋರಿರುವ ವಾಣಿಜ್ಯ ಕಟ್ಟಡಗಳಿಗೆ ಎಲ್ ಟಿ ಆಧಾರದ ಮೇಲೆ ಪ್ರತಿ ಸ್ಥಾಪನಕ್ಕೂ ಪ್ರತ್ಯೇಕ ಮಾಪಕಗಳೊಂದಿಗೆ, ವಿದ್ಯುತ್ ಸಂಪರ್ಕವನ್ನು ಒದಗಿಸಬಹುದಾಗಿರುತ್ತದೆ. ಅನ್ವಯವಾಗುವ ದರಪಟ್ಟಿಯಲ್ಲಿ ಬಿಲ್ಲಿಂಗ್ ಮಾಡಬೇಕಿರುತ್ತದೆ. | **150 ಕಿಲೋ ವ್ಯಾಟ್ ವರೆಗೆ ಮತ್ತು 150 ಕಿಲೋ ವ್ಯಾಟ್ ಒಳಗೊಂಡಂತೆ** ವಿದ್ಯುತ್ ಹೊರೆಯನ್ನು ಕೋರಿರುವ ವಾಣಿಜ್ಯ ಕಟ್ಟಡಗಳಿಗೆ ಎಲ್‌ಟಿ ಆಧಾರದ ಮೇಲೆ ಪ್ರತಿ ಸ್ಥಾಪನಕ್ಕೂ ಪ್ರತ್ಯೇಕ ಮಾಪಕಗಳೊಂದಿಗೆ, ವಿದ್ಯುತ್ ಸಂಪರ್ಕವನ್ನು ಒದಗಿಸಬಹುದಾಗಿರುತ್ತದೆ. ಅನ್ವಯವಾಗುವ ದರಪಟ್ಟಿಯಲ್ಲಿ ಬಿಲ್ಲಿಂಗ್ ಮಾಡಬೇಕಿರುತ್ತದೆ. |
| **9.09 ಟಿಪ್ಪಣಿ (i)** | ಈಗಾಗಲೇ ಸಂಪರ್ಕ ಪಡೆದು ಅಸ್ತಿತ್ವದಲ್ಲಿರುವ ವಾಣಿಜ್ಯ ಕಟ್ಟಡಗಳಲ್ಲಿ, ಸಂಪರ್ಕಿತ ವಿದ್ಯುತ್ ಹೊರೆ 100 ಕಿಲೋವ್ಯಾಟ್‌ಗಿಂತ ಕಡಿಮೆಯಿದ್ದಲ್ಲಿ ಮತ್ತು ಗ್ರಾಹಕರು ವೈಯಕ್ತಿಕ ಮಾಪಕ ಅಳವಡಿಸುವಂತೆ ಕೋರಿದಾಗ, ಗ್ರಾಹಕರು ತಮ್ಮ ಸ್ವಂತ ವೆಚ್ಚದಲ್ಲಿ ಎಲ್ ಇಸಿ ಮೂಲಕ ವೈರಿಂಗ್ ಮಾಡಿಸಿ, ಅಸ್ತಿತ್ವದಲ್ಲಿರುವ ಬೃಹತ್ ಮಾಪಕದ ಬದಿಯಲ್ಲಿ ಮಾಪಕವನ್ನು ಅಳವಡಿಸಿದ್ದಲ್ಲಿ ಪ್ರತ್ಯೇಕ ಮಾಪಕದ ವ್ಯವಸ್ಥೆಯನ್ನು ಮಾಡಬಹುದು. ಆದಾಗ್ಯೂ, ಬೃಹತ್ ಮಾಪಕದ ಮಂಜೂರಾಗಿರುವ ಹೊರೆಯನ್ನು ಪ್ರತ್ಯೇಕ ವೈಯುಕ್ತಿಕ ಮಾಪಕಕ್ಕಾಗಿ ವಿಭಜಿಸಲಾದ ಸ್ಥಾವರದ ವಿದ್ಯುತ್ | ಈಗಾಗಲೇ ಸಂಪರ್ಕ ಪಡೆದು ಅಸ್ತಿತ್ವದಲ್ಲಿರುವ ವಾಣಿಜ್ಯ ಕಟ್ಟಡಗಳಲ್ಲಿ, ಸಂಪರ್ಕಿತ ವಿದ್ಯುತ್ ಹೊರೆ 150 ಕಿಲೋವ್ಯಾಟ್‌ಗಿಂತ ಕಡಿಮೆಯಿದ್ದಲ್ಲಿ ಮತ್ತು ಗ್ರಾಹಕರು ವೈಯಕ್ತಿಕ ಮಾಪಕ ಅಳವಡಿಸುವಂತೆ ಕೋರಿದಾಗ, ಗ್ರಾಹಕರು ತಮ್ಮ ಸ್ವಂತ ವೆಚ್ಚದಲ್ಲಿ ಎಲ್‌ಇಸಿ ಮೂಲಕ ವೈರಿಂಗ್ ಮಾಡಿಸಿ, ಅಸ್ತಿತ್ವದಲ್ಲಿರುವ ಬೃಹತ್ ಮಾಪಕದ ಬದಿಯಲ್ಲಿ ಮಾಪಕವನ್ನು ಅಳವಡಿಸಿದ್ದಲ್ಲಿ ಪ್ರತ್ಯೇಕ ಮಾಪಕದ ವ್ಯವಸ್ಥೆಯನ್ನು ಮಾಡಬಹುದು. ಆದಾಗ್ಯೂ, ಬೃಹತ್ ಮಾಪಕದ ಮಂಜೂರಾಗಿರುವ ಹೊರೆಯನ್ನು ಪ್ರತ್ಯೇಕ ವೈಯುಕ್ತಿಕ ಮಾಪಕಕ್ಕಾಗಿ ವಿಭಜಿಸಲಾದ ಸ್ಥಾವರದ ವಿದ್ಯುತ್ ಹೊರೆಯ |

| 1 | 2 | 3 |
|---|---|---|
| **ಷರತ್ತು ಸಂ.** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| | ಹೊರೆಯ ಮೊತ್ತದಷ್ಟನ್ನು ಸ್ವಯಂಚಾಲಿತವಾಗಿ ಕಡಿಮೆ ಮಾಡಬೇಕಿರುತ್ತದೆ. | ಮೊತ್ತದಷ್ಟನ್ನು ಸ್ವಯಂಚಾಲಿತವಾಗಿ ಕಡಿಮೆ ಮಾಡಬೇಕಿರುತ್ತದೆ. |
| **9.09 ಟಿಪ್ಪಣಿ (ii)** | ಈಗಾಗಲೇ ಮಂಜೂರಾದ ಒಟ್ಟು ಭಾರಕ್ಕಿಂತ ಹೆಚ್ಚುವರಿ ಭಾರವನ್ನು ಕೋರಿದರೆ, ಅದನ್ನು 100 ಕೆಡಬ್ಲ್ಯೂ ಒಳಗೆ ಮಾತ್ರ ಮಂಜೂರು ಮಾಡಬೇಕು. 100 ಕೆಡಬ್ಲ್ಯೂ ಮತ್ತು ಅದಕ್ಕಿಂತ ಹೆಚ್ಚಿನ ಲೋಡ್ ಗಾಗಿ, ಗ್ರಾಹಕರು ಎಚ್ ಟಿ ಸಂಪರ್ಕವನ್ನು ಸ್ವತಃ ಪಡೆದುಕೊಳ್ಳಬೇಕು. | ಈಗಾಗಲೇ ಮಂಜೂರಾದ ಒಟ್ಟು ಭಾರಕ್ಕಿಂತ ಹೆಚ್ಚುವರಿ ಭಾರವನ್ನು ಕೋರಿದರೆ, ಅದನ್ನು 150 ಕೆಡಬ್ಲ್ಯೂ ಒಳಗೆ ಮಾತ್ರ ಮಂಜೂರು ಮಾಡಬೇಕು. 150 ಕೆಡಬ್ಲ್ಯೂ ಮತ್ತು ಅದಕ್ಕಿಂತ ಹೆಚ್ಚಿನ ಲೋಡ್ ಗಾಗಿ, ಗ್ರಾಹಕರು ಎಚ್ ಟಿ ಸಂಪರ್ಕವನ್ನು ಸ್ವತಃ ಪಡೆದುಕೊಳ್ಳಬೇಕು. |
| **29.04<br>29.04 (a)** | ಪಾವತಿ ವಿಧಾನ<br><br>ಗ್ರಾಹಕರು ವಿದ್ಯುತ್ ಸರಬರಾಜು ಶುಲ್ಕವನ್ನು ವಿದ್ಯುತ್ ಸಂಪರ್ಕ ನೀಡಲಾದ ಕಛೇರಿಯಲ್ಲಿ ಅಥವಾ ಈ ಕೆಳಗೆ ಸೂಚಿಸಿರುವ ಅಧಿಕಾರ ವ್ಯಾಪ್ತಿಯ ನಗದು ಕೌಂಟರ್ ಗಳಲ್ಲಿ ಪಾವತಿಸಬಹುದು: | ಪಾವತಿ ವಿಧಾನ<br><br>ಗ್ರಾಹಕರು ವಿದ್ಯುತ್ ಸರಬರಾಜು ಶುಲ್ಕವನ್ನು ವಿದ್ಯುತ್ ಸಂಪರ್ಕ ನೀಡಲಾದ ಕಛೇರಿಯಲ್ಲಿ ಅಥವಾ ಈ ಕೆಳಗೆ ಸೂಚಿಸಿರುವ ಅಧಿಕಾರ ವ್ಯಾಪ್ತಿಯ ನಗದು ಕೌಂಟರ್ ಗಳಲ್ಲಿ / **ಆರ್‌ಬಿಐ ಮಾರ್ಗಸೂಚಿಯಂತೆ ವಿತರಣಾ ಪರವಾನಗಿದಾರರು ಸುಗಮಗೊಳಿಸಿರುವ ವಿದ್ಯುನ್ಮಾನ ವಿಧಾನ / ಡಿಜಿಟಲ್ ವಿಧಾನದ** ಮೂಲಕ ಪಾವತಿಸಬಹುದು: |
| **29.04 (a) (1)** | ಕಂದಾಯ ಪಾವತಿಗಳಿಗೆ ಸಂಬಂಧಿಸಿದಂತೆ, ರೂ.10,000 ವರೆಗೆ ಮತ್ತು ಒಳಗೊಂಡ ಮಾಸಿಕ ವಿದ್ಯುತ್ ಸರಬರಾಜು ಶುಲ್ಕಗಳನ್ನು ನಗದು ಅಥವಾ ಚೆಕ್ ಅಥವಾ ಡಿ.ಡಿ. ಮೂಲಕ ಮಾಡಬಹುದು ಮತ್ತು ರೂ.10,000 ಕ್ಕಿಂತ ಹೆಚ್ಚಿನ ಪಾವತಿಗಳನ್ನು ಚೆಕ್ ಅಥವಾ ಡಿ.ಡಿ. ಮೂಲಕ ಮಾತ್ರ ಪಾವತಿಸಬೇಕು. | ಕಂದಾಯ ಪಾವತಿಗಳಿಗೆ ಸಂಬಂಧಿಸಿದಂತೆ, ರೂ.10,000 ವರೆಗೆ ಮತ್ತು ಒಳಗೊಂಡ ಮಾಸಿಕ ವಿದ್ಯುತ್ ಸರಬರಾಜು ಶುಲ್ಕಗಳನ್ನು ನಗದು ಅಥವಾ ಚೆಕ್ ಅಥವಾ ಡಿ.ಡಿ. ಅಥವಾ **ಆರ್‌ಬಿಐ ಮಾರ್ಗಸೂಚಿಯಂತೆ ವಿತರಣಾ ಪರವಾನಿಗೆದಾರರು ಸುಗಮಗೊಳಿಸಿರುವ ವಿದ್ಯುನ್ಮಾನ ವಿಧಾನ / ಡಿಜಿಟಲ್ ವಿಧಾನದ** ಮೂಲಕ ಮಾಡಬಹುದು ಮತ್ತು ರೂ.10,000 ಕ್ಕಿಂತ ಹೆಚ್ಚಿನ ಪಾವತಿಗಳನ್ನು ಚೆಕ್ ಅಥವಾ ಡಿ.ಡಿ. ಮೂಲಕ ಮಾತ್ರ ಅಥವಾ **ಆರ್‌ಬಿಐ ಮಾರ್ಗಸೂಚಿಯಂತೆ ವಿತರಣಾ ಪರವಾನಿಗೆದಾರರು ಸುಗಮಗೊಳಿಸಿರುವ ವಿದ್ಯುನ್ಮಾನ ವಿಧಾನ / ಡಿಜಿಟಲ್ ವಿಧಾನದ** ಮೂಲಕ ಮಾತ್ರ ಪಾವತಿಸಬೇಕು. |
| **29.04 (a) (2)** | ಇತರ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಪಾವತಿಗಳು ಅಂದರೆ, ಕಂದಾಯ ಪಾವತಿಗಳನ್ನು ಹೊರತುಪಡಿಸಿ, ರೂ. 10,000 ವರೆಗೆ ನಗದು ಅಥವಾ ಡಿ.ಡಿ. ಮೂಲಕ ಮತ್ತು ರೂ. 10,000 ಕ್ಕಿಂತ ಹೆಚ್ಚಿನದನ್ನು ಚೆಕ್ ಅಥವಾ ಡಿ.ಡಿ. ಮೂಲಕ ಮಾತ್ರ ಪಾವತಿಸಬೇಕು. | ಇತರ ಲೆಕ್ಕ ಶೀರ್ಷಿಕೆಯ ಅಡಿಯಲ್ಲಿ ಪಾವತಿಗಳು ಅಂದರೆ, ಕಂದಾಯ ಪಾವತಿಗಳನ್ನು ಹೊರತುಪಡಿಸಿ, ರೂ. 10,000 ವರೆಗೆ ನಗದು ಅಥವಾ ಡಿ.ಡಿ. ಅಥವಾ **ಆರ್‌ಬಿಐ ಮಾರ್ಗಸೂಚಿಯಂತೆ ವಿತರಣಾ ಪರವಾನಿಗೆದಾರರು ಸುಗಮಗೊಳಿಸಿರುವ ವಿದ್ಯುನ್ಮಾನ ವಿಧಾನ / ಡಿಜಿಟಲ್ ವಿಧಾನದ** ಮೂಲಕ ಮತ್ತು ರೂ. 10,000 ಕ್ಕಿಂತ ಹೆಚ್ಚಿನದನ್ನು ಚೆಕ್ ಅಥವಾ ಡಿ.ಡಿ. ಮೂಲಕ ಮಾತ್ರ ಅಥವಾ **ಆರ್ ಬಿಐ ಮಾರ್ಗಸೂಚಿಯಂತೆ ವಿತರಣಾ ಪರವಾನಿಗೆದಾರರು ಸುಗಮಗೊಳಿಸಿರುವ ವಿದ್ಯುನ್ಮಾನ ವಿಧಾನ / ಡಿಜಿಟಲ್ ವಿಧಾನದ** ಪಾವತಿಸಬೇಕು. |

ii) **2004 ರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ವಿದ್ಯುತ್ ಸರಬರಾಜಿಗಾಗಿ ವೆಚ್ಚದ ವಸೂಲಿ) ವಿನಿಯಮಗಳಲ್ಲಿನ, ಕೆಳಗಿನ ಕೋಷ್ಟಕದ ಕಲಂ-2 ರಲ್ಲಿ ಉಲ್ಲೇಖಿಸಲಾದ ಅಸ್ತಿತ್ವದಲ್ಲಿರುವ ವಿನಿಯಮಗಳನ್ನು ಕಲಂ-3 ರಲ್ಲಿ ಉಲ್ಲೇಖಿಸಲಾದ ವಿನಿಯಮಗಳಂತೆ ಬದಲಿಸಬೇಕು**:

<table>
<tr><th>1</th><th>2</th><th>3</th></tr>
<tr><th>ಷರತ್ತು ಸಂಖ್ಯೆ:</th><th>ಹಾಲಿ ಇರುವ ಷರತ್ತು</th><th>ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು</th></tr>
<tr>
<td>3.1.1 (ಎ)</td>
<td>35 ಕಿ.ವ್ಯಾ. ಗಿಂತ ಕಡಿಮೆ ವಿದ್ಯುತ್ ಹೊರೆ ಇರುವ ಗೃಹಬಳಕೆ, ವಾಣಿಜ್ಯ ಮತ್ತು ಮಿಶ್ರ ಹೊರೆ ಸ್ಥಾಪನಗಳಿಗೆ ಸಂಬಂಧಿಸಿದಂತೆ.
<table>
<tr><th>ಕೋರಿರುವ ಹೊರೆ</th><th>ವಸೂಲು ಮಾಡಬಹುದಾದ ಮೊತ್ತ</th></tr>
<tr><td>3 ಕಿ.ವ್ಯಾ ವರೆಗೆ (3 ಕಿ.ವ್ಯಾ) ಒಳಗೊಂಡಂತೆ</td><td>ಶೂನ್ಯ</td></tr>
<tr><td>3 ಕಿ.ವ್ಯಾ ಗಿಂತ ಹೆಚ್ಚು ಮತ್ತು 15 ಕಿ.ವ್ಯಾ ವರೆಗೆ (15 ಕಿ.ವ್ಯಾ) ಒಳಗೊಂಡಂತೆ</td><td>3 ಕಿ.ವ್ಯಾ ಗಿಂತ ಹೆಚ್ಚಿನ ಹೊರೆಗಳಿಗೆ ಪ್ರತಿ ಕಿ.ವ್ಯಾ ಗೆ ರೂ. 650.</td></tr>
<tr><td>15 ಕಿ.ವ್ಯಾ ಗಿಂತ ಹೆಚ್ಚು ಮತ್ತು 25 ಕಿ.ವ್ಯಾ ಗಿಂತ ಕಡಿಮೆ.</td><td>15 ಕಿ.ವ್ಯಾ.ಗಿಂತ ಹೆಚ್ಚಿನ ಹೊರೆಗಳಿಗೆ ರೂ.7800 ರ ಜೊತೆಗೆ ಪ್ರತಿ ಕಿ.ವ್ಯಾ.ಗೆ ರೂ.1300.</td></tr>
<tr><td>25 ಕಿ.ವ್ಯಾ ಮತ್ತು ಅದಕ್ಕಿಂತ ಹೆಚ್ಚು ಮತ್ತು 35 ಕಿ.ವ್ಯಾ ಗಿಂತ ಕಡಿಮೆ.</td><td>25 ಕಿ.ವ್ಯಾ.ಗಿಂತ ಹೆಚ್ಚಿನ ಹೊರೆಗಳಿಗೆ ರೂ.20,800 ರ ಜೊತೆಗೆ ಪ್ರತಿ ಕಿ.ವ್ಯಾ.ಗೆ ರೂ.15,000.</td></tr>
</table>
</td>
<td>150 ಕಿ.ವ್ಯಾ ಮತ್ತು ಅದಕ್ಕಿಂತ ಕಡಿಮೆ ವಿದ್ಯುತ್ ಹೊರೆ ಇರುವ ಗೃಹಬಳಕೆ, ವಾಣಿಜ್ಯ ಮತ್ತು ಮಿಶ್ರ ಹೊರೆ ಸ್ಥಾಪನಗಳಿಗೆ ಸಂಬಂಧಿಸಿದಂತೆ.
<table>
<tr><th>ಕೋರಿರುವ ಹೊರೆ</th><th>ವಸೂಲು ಮಾಡಬಹುದಾದ ಮೊತ್ತ</th></tr>
<tr><td>3 ಕಿ.ವ್ಯಾ ವರೆಗೆ (3 ಕಿ.ವ್ಯಾ) ಒಳಗೊಂಡಂತೆ</td><td>ಶೂನ್ಯ</td></tr>
<tr><td>3 ಕಿ.ವ್ಯಾ ಗಿಂತ ಹೆಚ್ಚು ಮತ್ತು 15 ಕಿ.ವ್ಯಾ ವರೆಗೆ (15 ಕಿ.ವ್ಯಾ) ಒಳಗೊಂಡಂತೆ</td><td>3 ಕಿ.ವ್ಯಾ ಗಿಂತ ಹೆಚ್ಚಿನ ಹೊರೆಗಳಿಗೆ ಪ್ರತಿ ಕಿ.ವ್ಯಾ ಗೆ ರೂ. 650.</td></tr>
<tr><td>15 ಕಿ.ವ್ಯಾ ಗಿಂತ ಹೆಚ್ಚು ಮತ್ತು 25 ಕಿ.ವ್ಯಾ ವರೆಗೆ (25 ಕಿ.ವ್ಯಾ) ಒಳಗೊಂಡಂತೆ.</td><td>15 ಕಿ.ವ್ಯಾ.ಗಿಂತ ಹೆಚ್ಚಿನ ಹೊರೆಗಳಿಗೆ ರೂ.7800 ರ ಜೊತೆಗೆ ಪ್ರತಿ ಕಿ.ವ್ಯಾ.ಗೆ ರೂ.1300.</td></tr>
<tr><td>25 ಕಿ.ವ್ಯಾ ಗಿಂತ ಹೆಚ್ಚು ಮತ್ತು 35 ಕಿ.ವ್ಯಾ ವರೆಗೆ (35 ಕಿ.ವ್ಯಾ) ಒಳಗೊಂಡಂತೆ</td><td>25 ಕಿ.ವ್ಯಾ.ಗಿಂತ ಹೆಚ್ಚಿನ ಹೊರೆಗಳಿಗೆ ರೂ.20,800 ರ ಜೊತೆಗೆ ಪ್ರತಿ ಕಿ.ವ್ಯಾ.ಗೆ ರೂ.15,000.</td></tr>
<tr><td>35 ಕಿ.ವ್ಯಾ ಗಿಂತ ಹೆಚ್ಚು ಮತ್ತು 150 ಕಿ.ವ್ಯಾ ವರೆಗೆ (150 ಕಿ.ವ್ಯಾ) ಒಳಗೊಂಡಂತೆ</td><td>ಕೋರಿರುವ ಸಂಪೂರ್ಣ ಹೊರೆಗೆ ಯುಜಿ / ಎಬಿ ಕೇಬಲ್ ಅನ್ವಯವಾಗುವಲ್ಲೆಲ್ಲಾ ಪ್ರತಿ ಕಿ.ವ್ಯಾ.ಗೆ ರೂ.8000 ಮತ್ತು ಒಹೆಚ್ (OH) ಮಾರ್ಗಗಳು ಅನ್ವಯವಾಗುವಲ್ಲೆಲ್ಲಾ ಪ್ರತಿ ಕಿ.ವ್ಯಾ.ಗೆ ರೂ.5800.</td></tr>
</table>
</td>
</tr>
</table>

<table>
<tr><th>1</th><th>2</th><th>3</th></tr>
<tr><th>ಷರತ್ತು ಸಂಖ್ಯೆ:</th><th>ಹಾಲಿ ಇರುವ ಷರತ್ತು</th><th>ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು</th></tr>
<tr><td>3.1.1 (ಎ) ಟಿಪ್ಪಣಿ: (ii)</td><td>ವಾಣಿಜ್ಯ ಹೊರೆಗಳ ಸಂದರ್ಭದಲ್ಲಿ, ಕೋರಿರುವ ಹೊರೆಯ ಗರಿಷ್ಠ ಮಿತಿಯು ಒಟ್ಟು 100 ಕಿ.ವ್ಯಾ. ಗಿಂತ ಕಡಿಮೆಯಿರಬೇಕು.</td><td>ವಾಣಿಜ್ಯ ಹೊರೆಗಳ ಸಂದರ್ಭದಲ್ಲಿ, ಕೋರಿರುವ ಹೊರೆಯ ಗರಿಷ್ಠ ಮಿತಿಯು ಒಟ್ಟು 150 ಕಿ.ವ್ಯಾ. ಒಳಗೊಂಡಂತೆ ಅದಕ್ಕಿಂತ ಕಡಿಮೆಯಿರಬೇಕು.</td></tr>
<tr><td>3.1.1 (ಎ) ಟಿಪ್ಪಣಿ: (iii)</td><td>ವಸತಿ ಅಪಾರ್ಟ್‌ಮೆಂಟ್‌ಗಳು / ಸಂಕೀರ್ಣಗಳ ವಿಷಯದಲ್ಲಿ, ಕೋರಿರುವ ಒಟ್ಟು ಹೊರೆಯು 100 ಕಿ.ವ್ಯಾ. ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದರೆ, ಅರ್ಜಿದಾರರ ಕೋರಿಕೆಯ ಮೇರೆಗೆ ಇತರೆ ಎಲ್ಲಾ ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕ ಮನೆಗಳಿಗೆ ಎಲ್‌ಟಿ ಪೂರೈಕೆಯನ್ನು ವ್ಯವಸ್ಥೆ ಮಾಡಬಹುದು.</td><td>ವಸತಿ ಅಪಾರ್ಟ್‌ಮೆಂಟ್‌ಗಳು / ಸಂಕೀರ್ಣಗಳ ವಿಷಯದಲ್ಲಿ, ಕೋರಿರುವ ಒಟ್ಟು ಹೊರೆಯು <u>151</u> ಕಿ.ವ್ಯಾ. ಅಥವಾ ಅದಕ್ಕಿಂತ ಹೆಚ್ಚಿನದಾಗಿದ್ದರೆ, ಅರ್ಜಿದಾರರ ಕೋರಿಕೆಯ ಮೇರೆಗೆ ಇತರೆ ಎಲ್ಲಾ ಷರತ್ತುಗಳನ್ನು ಗಮನದಲ್ಲಿಟ್ಟುಕೊಂಡು ಪ್ರತ್ಯೇಕ ಮನೆಗಳಿಗೆ ಎಲ್‌ಟಿ ಪೂರೈಕೆಯನ್ನು ವ್ಯವಸ್ಥೆ ಮಾಡಬಹುದು.</td></tr>
<tr><td>3.1.1 (ಎ) ಟಿಪ್ಪಣಿ: (iv)</td><td>ಮಿಶ್ರ ಹೊರೆಯ ಸಂದರ್ಭದಲ್ಲಿ, ವಾಣಿಜ್ಯ / ಕೈಗಾರಿಕಾ ಹೊರೆಯು 50 ಕಿ.ವ್ಯಾ. ಮೀರದಂತೆ, ಪ್ರತ್ಯೇಕ ಸ್ಥಾಪನಗಳಿಗೆ ಎಲ್‌ಟಿ ಪೂರೈಕೆಯನ್ನು ವ್ಯವಸ್ಥೆ ಮಾಡಬಹುದು.</td><td>ಮಿಶ್ರ ಹೊರೆಯ ಸಂದರ್ಭದಲ್ಲಿ, ವಾಣಿಜ್ಯ / ಕೈಗಾರಿಕಾ ಹೊರೆಯು 150 ಕಿ.ವ್ಯಾ. ಮೀರದಂತೆ, ಪ್ರತ್ಯೇಕ ಸ್ಥಾಪನಗಳಿಗೆ ಎಲ್‌ಟಿ ಪೂರೈಕೆಯನ್ನು ವ್ಯವಸ್ಥೆ ಮಾಡಬಹುದು.</td></tr>
<tr><td>3.1.1 (ಎ) ಟಿಪ್ಪಣಿ: (v)</td><td>ಮೇಲಿನ ಎಲ್ಲಾ ಸಂದರ್ಭಗಳಲ್ಲಿ, ಎಲ್‌ಟಿ ವೈಯಕ್ತಿಕ (ಏಕ) ಸ್ಥಾಪನದ ಹೊರೆಯನ್ನು 100 ಕಿ.ವ್ಯಾ. ವರೆಗೆ ವಿಸ್ತರಿಸಬಹುದು.</td><td>ಮೇಲಿನ ಎಲ್ಲಾ ಸಂದರ್ಭಗಳಲ್ಲಿ, ಎಲ್‌ಟಿ ವೈಯಕ್ತಿಕ (ಏಕ) ಸ್ಥಾಪನದ ಹೊರೆಯನ್ನು 150 ಕಿ.ವ್ಯಾ. ವರೆಗೆ ವಿಸ್ತರಿಸಬಹುದು (150 ಕಿ.ವ್ಯಾ. ಒಳಗೊಂಡಂತೆ).</td></tr>
<tr><td>3.1.1 (ಬಿ)</td><td>50 ಕಿ.ವ್ಯಾ. ಗಿಂತ ಕಡಿಮೆ ಹೊರೆ ಇರುವ ಕೈಗಾರಿಕಾ ಸ್ಥಾಪನಗಳಿಗೆ ಸಂಬಂಧಿಸಿದಂತೆ.
<table>
<tr><th>ಕೋರಿರುವ ಹೊರೆ</th><th>ವಸೂಲು ಮಾಡಬಹುದಾದ <u>ಮೊತ್ತ</u></th></tr>
<tr><td>3 ಕಿ.ವ್ಯಾ ವರೆಗೆ (3 ಕಿ.ವ್ಯಾ) ಒಳಗೊಂಡಂತೆ</td><td>ಶೂನ್ಯ</td></tr>
<tr><td>3 ಕಿ.ವ್ಯಾ ಗಿಂತ ಹೆಚ್ಚು ಮತ್ತು 15 ಕಿ.ವ್ಯಾ ವರೆಗೆ (15 ಕಿ.ವ್ಯಾ) ಒಳಗೊಂಡಂತೆ</td><td>3 ಕಿ.ವ್ಯಾ ಗಿಂತ ಹೆಚ್ಚಿನ ಹೊರೆಗಳಿಗೆ ಪ್ರತಿ ಕಿ.ವ್ಯಾ ಗೆ ರೂ. 650.</td></tr>
<tr><td>15 ಕಿ.ವ್ಯಾ ಗಿಂತ ಹೆಚ್ಚು ಮತ್ತು 25 ಕಿ.ವ್ಯಾ ವರೆಗೆ (25 ಕಿ.ವ್ಯಾ) ಒಳಗೊಂಡಂತೆ.</td><td>15 ಕಿ.ವ್ಯಾ. ಗಿಂತ ಹೆಚ್ಚಿನ ಹೊರೆಗಳಿಗೆ ರೂ.7800 ರ ಜೊತೆಗೆ ಪ್ರತಿ ಕಿ.ವ್ಯಾ.ಗೆ ರೂ.1300.</td></tr>
<tr><td>25 ಕಿ.ವ್ಯಾ ಗಿಂತ ಹೆಚ್ಚು ಮತ್ತು 50 ಕಿ.ವ್ಯಾ ಗಿಂತ ಕಡಿಮೆ.</td><td>25 ಕಿ.ವ್ಯಾ.ಗಿಂತ ಹೆಚ್ಚಿನ ಹೊರೆಗಳಿಗೆ ರೂ.20,800 ರ ಜೊತೆಗೆ ಪ್ರತಿ ಕಿ.ವ್ಯಾ.ಗೆ ರೂ.1,950.</td></tr>
</table></td><td>150 ಕಿ.ವ್ಯಾ. ಒಳಗೊಂಡಂತೆ ಅದಕ್ಕಿಂತ ಕಡಿಮೆ ಹೊರೆ ಇರುವ ಕೈಗಾರಿಕಾ ಸ್ಥಾಪನಗಳಿಗೆ ಸಂಬಂಧಿಸಿದಂತೆ.
<table>
<tr><th>ಕೋರಿರುವ ಹೊರೆ</th><th>ವಸೂಲು ಮಾಡಬಹುದಾದ <u>ಮೊತ್ತ</u></th></tr>
<tr><td>3 ಕಿ.ವ್ಯಾ ವರೆಗೆ (3 ಕಿ.ವ್ಯಾ) ಒಳಗೊಂಡಂತೆ</td><td>ಶೂನ್ಯ</td></tr>
<tr><td>3 ಕಿ.ವ್ಯಾ ಗಿಂತ ಹೆಚ್ಚು ಮತ್ತು 15 ಕಿ.ವ್ಯಾ ವರೆಗೆ (15 ಕಿ.ವ್ಯಾ) ಒಳಗೊಂಡಂತೆ</td><td>3 ಕಿ.ವ್ಯಾ ಗಿಂತ ಹೆಚ್ಚಿನ ಹೊರೆಗಳಿಗೆ ಪ್ರತಿ ಕಿ.ವ್ಯಾ ಗೆ ರೂ. 650.</td></tr>
<tr><td>15 ಕಿ.ವ್ಯಾ ಗಿಂತ ಹೆಚ್ಚು ಮತ್ತು 25 ಕಿ.ವ್ಯಾ ವರೆಗೆ (25 ಕಿ.ವ್ಯಾ) ಒಳಗೊಂಡಂತೆ.</td><td>15 ಕಿ.ವ್ಯಾ. ಗಿಂತ ಹೆಚ್ಚಿನ ಹೊರೆಗಳಿಗೆ ರೂ.7800 ರ ಜೊತೆಗೆ ಪ್ರತಿ ಕಿ.ವ್ಯಾ.ಗೆ ರೂ.1300.</td></tr>
<tr><td>25 ಕಿ.ವ್ಯಾ ಗಿಂತ ಹೆಚ್ಚು ಮತ್ತು 50 ಕಿ.ವ್ಯಾ ವರೆಗೆ (50 ಕಿ.ವ್ಯಾ ಒಳಗೊಂಡಂತೆ).</td><td>25 ಕಿ.ವ್ಯಾ.ಗಿಂತ ಹೆಚ್ಚಿನ ಹೊರೆಗಳಿಗೆ ರೂ.20,800 ರ ಜೊತೆಗೆ ಪ್ರತಿ ಕಿ.ವ್ಯಾ.ಗೆ ರೂ.1,950.</td></tr>
</table></td></tr>
</table>

| 1 | 2 | 3 |
|---|---|---|
| **ಷರತ್ತು ಸಂಖ್ಯೆ:** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| | | <table><tr><td>**50 ಕಿ.ವ್ಯಾ ಗಿಂತ ಹೆಚ್ಚು ಮತ್ತು 150 ಕಿ.ವ್ಯಾ ವರೆಗೆ (150 ಕಿ.ವ್ಯಾ) ಒಳಗೊಂಡಂತೆ**</td><td>**ಕೋರಿರುವ ಸಂಪೂರ್ಣ ಹೊರೆಗೆ ಯುಜಿ / ಎಬಿ ಕೇಬಲ್ ಅನ್ವಯವಾಗುವಲ್ಲೆಲ್ಲಾ ಪ್ರತಿ ಕಿ.ವ್ಯಾ.ಗೆ ರೂ.8000 ಮತ್ತು ಒಹೆಚ್ (OH) ಮಾರ್ಗಗಳು ಅನ್ವಯವಾಗುವಲ್ಲೆಲ್ಲಾ ಪ್ರತಿ ಕಿ.ವ್ಯಾ.ಗೆ ರೂ.5800.**</td></tr></table> |
| **ಟಿಪ್ಪಣಿ:** | ಮೇಲಿನ ಎ ಮತ್ತು ಬಿ ಎರಡಕ್ಕೂ ಅನ್ವಯಿಸುತ್ತದೆ; | ಮೇಲಿನ ಎ ಮತ್ತು ಬಿ ಎರಡಕ್ಕೂ ಅನ್ವಯಿಸುತ್ತದೆ; |
| (ಬಿ) | ಕೈಗಾರಿಕಾ ವಿದ್ಯುಚ್ಛಕ್ತಿ ಹೊರೆಯ ಸಂದರ್ಭದಲ್ಲಿ, ವಿನಂತಿಸಲಾದ ಗರಿಷ್ಠ ಹೊರೆಯು 50 ಕಿ.ವ್ಯಾ. ಗಿಂತ ಕಡಿಮೆ ಇರಬೇಕು. | ಕೈಗಾರಿಕಾ ವಿದ್ಯುಚ್ಛಕ್ತಿ ಹೊರೆಯ ಸಂದರ್ಭದಲ್ಲಿ, ವಿನಂತಿಸಲಾದ ಗರಿಷ್ಠ ಹೊರೆಯು **150 ಕಿ.ವ್ಯಾ. ಮತ್ತು ಅದಕ್ಕಿಂತ ಕಡಿಮೆ ಇರಬೇಕು**. |
| (ಸಿ) | ಮೇಲಿನ ಶುಲ್ಕಗಳಿಗೆ ಹೆಚ್ಚುವರಿಯಾಗಿ, ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ನಗರ ಪುರಸಭೆ, ಯಲಹಂಕ ನಗರ ಪುರಸಭೆ, ಬ್ಯಾಟರಾಯನಪುರ ನಗರ ಪುರಸಭೆ, ಕೆಂಗೇರಿ ಪಟ್ಟಣ ಪುರಸಭೆ, ರಾಜರಾಜೇಶ್ವರಿನಗರ ಪುರಸಭೆ, ಕೃಷ್ಣರಾಜಪುರ ನಗರ ಪುರಸಭೆ, ಮಹದೇವಪುರ ನಗರ ಪುರಸಭೆ, ಬೊಮ್ಮನಹಳ್ಳಿ ನಗರ ಪುರಸಭೆ ಮತ್ತು ಬಿಡಿಎ ಪ್ರದೇಶಗಳನ್ನು ಒಳಗೊಂಡ ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಎಚ್‌ಟಿ / ಎಲ್‌ಟಿ ಯುಜಿ ಕೇಬಲ್ / ಎಬಿಸಿ ವ್ಯವಸ್ಥೆ ಮಾಡಿದಾಗ 3 ಕಿ.ವ್ಯಾ.ಗಿಂತ ಹೆಚ್ಚಿನ ಹೊರೆಗಳಿಗೆ ರೂ.1000 / ಕಿ.ವ್ಯಾ ಹೆಚ್ಚುವರಿ ಮೊತ್ತವನ್ನು ಸಂಗ್ರಹಿಸಬೇಕು. | ಮೇಲಿನ ಶುಲ್ಕಗಳಿಗೆ ಹೆಚ್ಚುವರಿಯಾಗಿ, ಬೆಂಗಳೂರು ಮಹಾನಗರ ಪಾಲಿಕೆ, ದಾಸರಹಳ್ಳಿ ನಗರ ಪುರಸಭೆ, ಯಲಹಂಕ ನಗರ ಪುರಸಭೆ, ಬ್ಯಾಟರಾಯನಪುರ ನಗರ ಪುರಸಭೆ, ಕೆಂಗೇರಿ ಪಟ್ಟಣ ಪುರಸಭೆ, ರಾಜರಾಜೇಶ್ವರಿನಗರ ಪುರಸಭೆ, ಕೃಷ್ಣರಾಜಪುರ ನಗರ ಪುರಸಭೆ, ಮಹದೇವಪುರ ನಗರ ಪುರಸಭೆ, ಬೊಮ್ಮನಹಳ್ಳಿ ನಗರ ಪುರಸಭೆ ಮತ್ತು ಬಿಡಿಎ ಪ್ರದೇಶಗಳನ್ನು ಒಳಗೊಂಡ ಬೆಂಗಳೂರು ಮಹಾನಗರ ಪ್ರದೇಶದಲ್ಲಿ ಎಚ್‌ಟಿ / ಎಲ್‌ಟಿ ಯುಜಿ ಕೇಬಲ್ /ಎಬಿಸಿ ವ್ಯವಸ್ಥೆ ಮಾಡಿದಾಗ 3 ಕಿ.ವ್ಯಾ.ಗಿಂತ ಹೆಚ್ಚಿನ ಹೊರೆಗಳಿಗೆ ರೂ.1000 / ಕಿ.ವ್ಯಾ ಹೆಚ್ಚುವರಿ ಮೊತ್ತವನ್ನು ಸಂಗ್ರಹಿಸಬೇಕು.<br>ಆದಾಗ್ಯೂ, ಗೃಹ, ವಾಣಿಜ್ಯ ಮತ್ತು ಮಿಶ್ರ ಹೊರೆಯ ಸ್ಥಾವರಗಳಿಗೆ ಸಂಬಂಧಿಸಿದಂತೆ 35 ಕಿ.ವ್ಯಾ. ಗಿಂತ ಹೆಚ್ಚಿನ ವಿದ್ಯುತ್ ಹೊರೆಯನ್ನು ಕೋರಿರುವ ಸ್ಥಾವರಗಳಿಗೆ ಮತ್ತು ಕೈಗಾರಿಕಾ ಸ್ಥಾವರಗಳಿಗೆ ಸಂಬಂಧಿಸಿದಂತೆ 50 ಕಿ.ವ್ಯಾ ಮತ್ತು ಅದಕ್ಕಿಂತ ಹೆಚ್ಚಿನ ವಿದ್ಯುತ್ ಹೊರೆಯನ್ನು ಕೋರಿರುವ ಸ್ಥಾವರಗಳಿಗೆ ಈ ಶುಲ್ಕಗಳು ಅನ್ವಯಿಸುವುದಿಲ್ಲ. |

iii) **2007 ರ, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ (ಭದ್ರತಾ ಠೇವಣಿ) ವಿನಿಯಮಗಳಲ್ಲಿನ, ಕೆಳಗಿನ ಕೋಷ್ಟಕದ ಕಲಂ-2 ರಲ್ಲಿ ಉಲ್ಲೇಖಿಸಲಾದ ಅಸ್ತಿತ್ವದಲ್ಲಿರುವ ವಿನಿಯಮಗಳನ್ನು ಕಲಂ-3 ರಲ್ಲಿ ಉಲ್ಲೇಖಿಸಲಾದ ವಿನಿಯಮಗಳಂತೆ ಬದಲಿಸಬೇಕು**:

| 1 | 2 | 3 |
|---|---|---|
| **ಷರತ್ತು ಸಂಖ್ಯೆ:** | **ಹಾಲಿ ಇರುವ ಷರತ್ತು** | **ತಿದ್ದುಪಡಿ / ಸೇರ್ಪಡೆ ಮಾಡಲಾದ ಷರತ್ತು** |
| **7.0 (i)** | ಭದ್ರತಾ ಠೇವಣಿ ಪಾವತಿ ವಿಧಾನ<br>ಆರಂಭಿಕ ಭದ್ರತಾ ಠೇವಣಿ (ಐಎಸ್‌ಡಿ) ಅನ್ನು ನಗದು / ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) / ಪೇ ಆರ್ಡರ್ / ಪರವಾನಿಗೆದಾರರ ಹೆಸರಿನಲ್ಲಿ ಡ್ರಾ ಮಾಡಿದ ಬ್ಯಾಂಕರ್ಸ್ ಚೆಕ್‌ನ ರೂಪದಲ್ಲಿ ಪಾವತಿಸಬೇಕು. | ಭದ್ರತಾ ಠೇವಣಿ ಪಾವತಿ ವಿಧಾನ'<br>ಆರಂಭಿಕ ಭದ್ರತಾ ಠೇವಣಿ (ಐಎಸ್‌ಡಿ) ಅನ್ನು **ಆರ್‌ಬಿಐ ಮಾರ್ಗಸೂಚಿಯಂತೆ ವಿತರಣಾ ಪರವಾನಿಗೆದಾರರು ಸುಗಮಗೊಳಿಸಿರುವ ವಿದ್ಯುನ್ಮಾನ ವಿಧಾನ / ಅಂಗೀಕೃತ ವಿಧಾನದ ಮೂಲಕದ ಅಥವಾ** ನಗದು / ಡಿಮ್ಯಾಂಡ್ ಡ್ರಾಫ್ಟ್ (ಡಿಡಿ) / ಪೇ ಆರ್ಡರ್ / ಪರವಾನಗಿದಾರರ ಹೆಸರಿನಲ್ಲಿ ಡ್ರಾ ಮಾಡಿದ ಬ್ಯಾಂಕರ್ಸ್ ಚೆಕ್‌ನ ರೂಪದಲ್ಲಿ ಪಾವತಿಸಬೇಕು |

ಆಯೋಗದ ಆದೇಶದ ಮೇರೆಗೆ

ಸಹಿ/-

**ಕಾರ್ಯದರ್ಶಿ**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ

**ಅನುಬಂಧ – 12**

# ಘೋಷಣೆ

________________ ರವರ ಮಗ / ಮಗಳಾದ, _________________ ನಿವಾಸಿಯಾದ ನಾನು_______, (ಕಾರ್ಯನಿರ್ವಾಹಕರು, ಆಡಳಿತಗಾರರು, ವಾರಸುದಾರರು, ಉತ್ತರಾಧಿಕಾರಿಗಳು ಮತ್ತು ನಿಯೋಜಕರನ್ನು ಈ ಪದವು ಒಳಗೊಂಡಿದ್ದು ಇನ್ನು ಮುಂದೆ ಇವರನ್ನು "ಅರ್ಜಿದಾರ" ಎಂದು ಉಲ್ಲೇಖಿಸಲಾಗುವುದು), ಈ ಮೂಲಕ ಪ್ರಮಾಣ ಮಾಡುತ್ತೇನೆ ಮತ್ತು ಈ ಕೆಳಗಿನಂತೆ ಘೋಷಿಸುತ್ತೇನೆ.

ಅಥವಾ

________________ ಕಂಪನಿಯು ಕಂಪನಿ ಕಾಯ್ದೆ, 1956ರ ನಿಬಂಧನೆಗಳ ಅಡಿಯಲ್ಲಿ ಅಥವಾ ತಿದ್ದುಪಡಿ ಮಾಡಿದಂತೆ, ಅದರ ನೋಂದಾಯಿತ ಕಚೇರಿಯನ್ನು _______________ ನಲ್ಲಿ ಹೊಂದಿದೆ (ಇನ್ನು ಮುಂದೆ ಇದನ್ನು "ಅರ್ಜಿದಾರ" ಎಂದು ಉಲ್ಲೇಖಿಸಲಾಗುತ್ತದೆ, ಈ ಪದವು ಸಂದರ್ಭಕ್ಕೆ ಅಥವಾ ಅದರ ಅರ್ಥಕ್ಕೆ ಹೊಂದಿಕೆಯಾಗದ ಹೊರತು, ಅದರ ಉತ್ತರಾಧಿಕಾರಿಗಳು ಮತ್ತು ನಿಯೋಜಕರನ್ನು ಒಳಗೊಂಡಿರುತ್ತದೆ), ತನ್ನ ಅಧಿಕೃತ ಪ್ರತಿನಿಧಿ ಶ್ರೀ. _________ ರವರ ಮೂಲಕ ಪ್ರಮಾಣ ಮಾಡುತ್ತದೆ ಮತ್ತು ಈ ಕೆಳಗಿನಂತೆ ಘೋಷಿಸುತ್ತದೆ.

ಅಥವಾ

ಏಕೈಕ ಮಾಲೀಕತ್ವ / ಪಾಲುದಾರಿಕೆ ಸಂಸ್ಥೆಯು ತನ್ನ ಕಚೇರಿಯನ್ನು _________ ನಲ್ಲಿ ಹೊಂದಿದೆ (ಇನ್ನು ಮುಂದೆ ಇದನ್ನು "ಅರ್ಜಿದಾರ" ಎಂದು ಉಲ್ಲೇಖಿಸಲಾಗುತ್ತದೆ, ಇದು ಸಂದರ್ಭವನ್ನು ಒದಗಿಸದ ಹೊರತು, ಅದರ ಉತ್ತರಾಧಿಕಾರಿಗಳು ಮತ್ತು ನಿಯೋಜಕರನ್ನು ಒಳಗೊಂಡಿರುತ್ತದೆ), ಒಬ್ಬ ಪಾಲುದಾರ ಅಥವಾ ಅಧಿಕೃತ ಪ್ರತಿನಿಧಿ ಶ್ರೀ._____________ ರವರ ಮೂಲಕ ಪ್ರಮಾಣ ಮಾಡುತ್ತದೆ ಮತ್ತು ಈ ಕೆಳಗಿನಂತೆ ಘೋಷಿಸುತ್ತದೆ.

ಅರ್ಜಿದಾರನು _________ ನಲ್ಲಿರುವ (ಇನ್ನು ಮುಂದೆ "ಆವರಣ) ಆವರಣದ ಕಾನೂನುಬದ್ಧ ನಿವಾಸಿಯಾಗಿರುತ್ತಾನೆ.

ಅರ್ಜಿದಾರನು ಅರ್ಜಿ ನಮೂನೆಯಲ್ಲಿ ಉಲ್ಲೇಖಿಸಲಾದ ಉದ್ದೇಶಕ್ಕಾಗಿ ಮೇಲೆ ತಿಳಿಸಲಾದ ಆವರಣದಲ್ಲಿ ಅರ್ಜಿದಾರನ ಹೆಸರಿನಲ್ಲಿ ಸೇವಾ ಸಂಪರ್ಕವನ್ನು ಒದಗಿಸಲು ಪರವಾನಗಿದಾರರನ್ನು ಕೋರಿದ್ದಾನೆ.

ಪ್ರಸ್ತುತ ಘೋಷಣೆಯನ್ನು ನೀಡುವಲ್ಲಿ, ಅರ್ಜಿದಾರನು ಈ ಘೋಷಣೆಗೆ ಸಂಬಂಧಿಸಿದಂತೆ ಸಲ್ಲಿಸಿದ ಯಾವುದೇ ಹೇಳಿಕೆಗಳು ಅಥವಾ ದಾಖಲೆಗಳು ಸುಳ್ಳು, ತಪ್ಪಾಗಿದೆ ಅಥವಾ ವಂಚನೆ ಎಂದು ಸಾಬೀತಾದರೆ, ಯಾವುದೇ ಹಂತದಲ್ಲಿ ಪರವಾನಿಗೆದಾರರು ತಮ್ಮ ಕಾನೂನುಬದ್ಧ ಹಕ್ಕುಗಳೊಳಗೆ ಯಾವುದೇ ಮುನ್ಸೂಚನೆ ನೀಡದೆ ಆವರಣಕ್ಕೆ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಬಹುದು ಮತ್ತು ಗ್ರಾಹಕ ಭದ್ರತಾ ಠೇವಣಿಗೆ ಎದುರಾಗಿ ಅರ್ಜಿದಾರನು ಪಾವತಿಸಬೇಕಾದ ವಿದ್ಯುತ್ ಸರಬರಾಜು ಬಾಕಿಗಳನ್ನು ಸರಿಹೊಂದಿಸಲು ಮುಂದುವರೆಯಬಹುದು ಮತ್ತು / ಅಥವಾ ಕಾನೂನಿನ ಪ್ರಕಾರ ಅದನ್ನು ವಸೂಲಿ ಮಾಡಬಹುದು ಮತ್ತು ದಂಡ ಸಂಹಿತೆಗೆ ಅನುಗುಣವಾಗಿ ಕ್ರಮವನ್ನು ಕೈಗೊಳ್ಳಬಹುದು ಎಂಬುದನ್ನು ಅರ್ಜಿದಾರನು ಸ್ಪಷ್ಟವಾಗಿ ಅರ್ಥಮಾಡಿಕೊಂಡಿರತಕ್ಕದ್ದು.

ಅರ್ಜಿದಾರನು ಪ್ರಸ್ತುತ ಜಾರಿಯಲ್ಲಿರುವ ಸಂಬಂಧಿತ ಶಾಸನಗಳ ಅಡಿಯಲ್ಲಿ ಎಲ್ಲಾ ಅವಶ್ಯಕತೆಗಳನ್ನು ಅನುಸರಿಸಿದ್ದು ಮತ್ತು ಅದರ ಉಲ್ಲಂಘನೆಯಿಂದ ಉಂಟಾಗುವ ಯಾವುದೇ ಸಮಸ್ಯೆಗೆ ಅರ್ಜಿದಾರನು / ಅರ್ಜಿದಾರಳು ಸ್ವತಃ ಕಾನೂನುಬದ್ಧವಾಗಿ ಜವಾಬ್ದಾರನಾಗಿರುತ್ತಾನೆ / ತ್ತಾಳೆ ಮತ್ತು ಅಂತಹ ಸಂದರ್ಭದಲ್ಲಿ ಪರವಾನಿಗೆದಾರರು ಅನ್ವಯವಾಗುವ ಕಾನೂನಿನ ಅನುಸಾರವಾಗಿ ಕ್ರಮ ಕೈಗೊಳ್ಳಬಹುದು.

ಅರ್ಜಿದಾರನಾದ ನಾನು ಈ ಮೂಲಕ ಕೆಳಗಿನವುಗಳನ್ನು ಒಪ್ಪಿಕೊಳ್ಳುತ್ತೇನೆ ಮತ್ತು ಅದರಂತೆ ನಡೆದುಕೊಳ್ಳುತ್ತೇನೆ:

1. ಒಂದು ವೇಳೆ ಅರ್ಜಿದಾರನು ಆವರಣದ ಏಕೈಕ ಮಾಲೀಕನಲ್ಲದಿದ್ದರೆ, ವಿದ್ಯುತ್ ಸಂಪರ್ಕವನ್ನು ಪಡೆಯಲು ಸಹ-ಮಾಲೀಕರಿಂದ ನಿರಾಪೇಕ್ಷಣ ಪತ್ರವನ್ನು ಪಡೆಯಲಾಗಿದೆ.
2. ಅರ್ಜಿದಾರನಿಗೆ ನೀಡಿದ ಹೊಸ ಸೇವಾ ಸಂಪರ್ಕದ ಕಾರಣಗಳಿಂದಾಗಿ ಪರವಾನಿಗೆದಾರನು ಭರಿಸಬಹುದಾದ ಎಲ್ಲಾ ವಿಚಾರಣೆಗಳು, ಹಕ್ಕುಗಳು, ಬೇಡಿಕೆಗಳು, ವೆಚ್ಚಗಳು, ಹಾನಿಗಳು, ಖರ್ಚುಗಳ ವಿರುದ್ಧ ಪರವಾನಿಗೆದಾರರನ್ನು ಕಾಪಾಡುವುದು.
3. ಅರ್ಜಿದಾರರ ತಿಳುವಳಿಕೆಗೆ ತಕ್ಕಂತೆ, ಆವರಣದೊಳಗಿನ ಎಲ್ಲಾ ವಿದ್ಯುತ್ ಕೆಲಸಗಳು, ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ (ಸುರಕ್ಷತೆ ಮತ್ತು ವಿದ್ಯುತ್ ಸರಬರಾಜಿಗೆ ಸಂಬಂಧಿಸಿದ ಕ್ರಮಗಳು) ದ ವಿನಿಯಮಗಳು, 2010 ಮತ್ತು ಕಾಲಕಾಲಕ್ಕೆ ತಿದ್ದುಪಡಿಯ ಅನುಸಾರವಾಗಿ ಮಾಡಲ್ಪಟ್ಟಿವೆ. ಎಚ್‌ಟಿ ಬ್ರೇಕರ್, ಪರಿವರ್ತಕ, ಎಂಎಸ್‌ಬಿ (>15ಮೀ. ಎತ್ತರ), ಎಲ್‌ಟಿ ಕೇಬಲ್, ಎಲ್‌ಟಿ ಸ್ವಿಚ್‌ಗೇರ್ ಮತ್ತು ಎಲ್‌ಟಿ ಲೋಡ್ (ಹೆಚ್‌ಟಿ ಸ್ಥಾಪನಗಳಿಗೆ ಅನ್ವಯಿಸುತ್ತದೆ) ಅನ್ನು ಒಳಗೊಂಡ ವಿದ್ಯುತ್ ಮೂಲಸೌಕರ್ಯ ಕಾರ್ಯಗಳನ್ನು

ಅರ್ಜಿದಾರರ ಆವರಣದಲ್ಲಿ ಪೂರ್ಣಗೊಳಿಸಲಾಗಿದೆ ಮತ್ತು ಅರ್ಜಿದಾರರು ರೇಖಾಚಿತ್ರ ಮತ್ತು ಕಾರ್ಯಾರಂಭದ ಅನುಮೋದನೆಯನ್ನು ಸಿಇಐಜಿ, ಕರ್ನಾಟಕ ಸರ್ಕಾರ ಇವರಿಂದ ಪಡೆದಿದ್ದಾರೆ. ಅದರ ನಕಲು ಅರ್ಜಿದಾರರೊಂದಿಗೆ ಲಭ್ಯವಿದೆ.

4. ಆವರಣದಲ್ಲಿನ ಆಂತರಿಕ ವೈರಿಂಗ್‌ನ್ನು ಪರವಾನಿಗೆ ಪಡೆದ ವಿದ್ಯುತ್ ಗುತ್ತಿಗೆದಾರರಿಂದ ಪರೀಕ್ಷಿಸಲಾಗಿದೆ ಮತ್ತು ಪ್ರಮಾಣೀಕೃತ ಪರೀಕ್ಷಾ ಪ್ರಮಾಣಪತ್ರವು ಅರ್ಜಿದಾರರೊಂದಿಗೆ ಲಭ್ಯವಿದೆ.
5. ಸೌರಜಲ ತಾಪನ ವ್ಯವಸ್ಥೆ ಕಡ್ಡಾಯವಾಗಿರುವ, ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಇಎನ್ 396 ಎನ್‌ಸಿಇ 2006 ದಿನಾಂಕ: 13.11.2007 ರ ಪ್ರಕಾರ ಕಟ್ಟಡದಲ್ಲಿ ಸೌರಜಲ ತಾಪನ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ.
6. ಚಾಲ್ತಿಯಲ್ಲಿರುವ ಕಟ್ಟಡ ಉಪ-ಕಾನೂನುಗಳಿಗೆ ಅನುಗುಣವಾಗಿ ಕಟ್ಟಡವನ್ನು ನಿರ್ಮಿಸಲಾಗಿದೆ ಮತ್ತು ಕಟ್ಟಡದ ಒಟ್ಟು ಎತ್ತರವು,
    i. ☐ ಸೇವಾ ಸಂಪರ್ಕವನ್ನು ಕೋರುವ ದಿನಾಂಕದಂದು 15 (ಹದಿನೈದು) ಮೀಟರ್ ಎತ್ತರವನ್ನು ಮೀರಿರುವುದಿಲ್ಲ; ಅಥವಾ
    ii. ☐ ಕಟ್ಟಡದ ಒಟ್ಟು ಎತ್ತರವು 15 (ಹದಿನೈದು) ಮೀಟರ್‌ಗಳಿಗಿಂತ ಹೆಚ್ಚು ಇದ್ದು, ವಿದ್ಯುತ್ ಪರಿವೀಕ್ಷಣಾಲಯದ ಅನುಮೋದನೆ, ಅಗ್ನಿ ಸುರಕ್ಷತಾ ಪ್ರಮಾಣಪತ್ರವು ಅರ್ಜಿದಾರರಲ್ಲಿ ಲಭ್ಯವಿದೆ.
7. ಚಾಲ್ತಿಯಲ್ಲಿರುವ ಕಟ್ಟಡ ಉಪ-ಕಾನೂನುಗಳಿಗೆ ಅನುಗುಣವಾಗಿ ಕಟ್ಟಡವನ್ನು ನಿರ್ಮಿಸಲಾಗಿದೆ ಮತ್ತು ಕಟ್ಟಡದ ಒಟ್ಟು ನಿರ್ಮಿತ ಚದರಳತೆಯು,
    i. ☐ ಸೇವಾ ಸಂಪರ್ಕವನ್ನು ಕೋರುವ ದಿನಾಂಕದಂದು 800 ಚದರ ಮೀಟರ್ ಮೀರಿರುವುದಿಲ್ಲ; ಅಥವಾ
    ii. ☐ 800 ಚದರ ಮೀಟರ್‌ಗಿಂತ ಹೆಚ್ಚು ಇದ್ದು, ಸಕ್ಷಮ ಪ್ರಾಧಿಕಾರದಿಂದ ಮಂಜೂರಾದ ಕಟ್ಟಡದ ಯೋಜನೆಯು (Plan) ಅರ್ಜಿದಾರರ ಬಳಿ ಲಭ್ಯವಿರುತ್ತದೆ.
8. ಆವರಣದಲ್ಲಿ ಲಿಫ್ಟ್ ಸ್ಥಾಪಿಸಲು ಅವಕಾಶ ಮಾಡಿದ್ದರೆ, ಅರ್ಜಿದಾರರು ಹೇಳಿದ ಆವರಣದಲ್ಲಿ ಲಿಫ್ಟಿಗಾಗಿ ವಿದ್ಯುತ್ ಪರಿವೀಕ್ಷಕರಿಂದ ಲಿಫ್ಟ್ ಅರ್ಹತಾ ಪ್ರಮಾಣಪತ್ರವನ್ನು ಪಡೆದುಕೊಳ್ಳಲಾಗಿರುತ್ತದೆ ಮತ್ತು ಪ್ರಮಾಣಪತ್ರವು ಅರ್ಜಿದಾರರ ಬಳಿ ಲಭ್ಯವಿರುತ್ತದೆ.
9. ವಿದ್ಯುತ್ ಅನ್ನು ಬಳಕೆ ಮಾಡುವ ಸಲುವಾಗಿ ಸಿದ್ಧಪಡಿಸಲಾದ ಆವರಣದಲ್ಲಿ ಬಳಕೆ ಮಾಡಲು ಉದ್ದೇಶಿಸಿರುವ ಯಂತ್ರೋಪಕರಣಗಳ ನಾಮಫಲಕ, ತಯಾರಿಕೆ, ಸಾಮರ್ಥ್ಯ ಮತ್ತು ವಿನ್ಯಾಸದಂತಹ ವಿವರಗಳನ್ನು ತೋರಿಸುವ ಪಟ್ಟಿಯು ಅರ್ಜಿದಾರರ ಬಳಿ ಲಭ್ಯವಿರುತ್ತದೆ.

10. ಅರ್ಜಿದಾರರು ಅನ್ವಯಿಸುವ ವಿದ್ಯುತ್ ದರಪಟ್ಟಿಯ ಪ್ರಕಾರ, ಸರಿಯಾದ ವಿದ್ಯುತ್ ದರದ ವರ್ಗಕ್ಕೆ ಅರ್ಜಿ ಸಲ್ಲಿಸಿದ್ದಾರೆ. ಸಂಪರ್ಕದ ಈ ಕೆಳಗಿನ ವರ್ಗಗಳಿಗೆ, ಅರ್ಜಿದಾರರು ತಮ್ಮ ಬಳಿ ಈ ಕೆಳಗಿನ ಸೂಕ್ತ ದಾಖಲೆಗಳನ್ನು ಲಭ್ಯವಿರಿಸಿಕೊಂಡಿರುತ್ತಾರೆ.
    - ವಾಣಿಜ್ಯ / ಕೈಗಾರಿಕೆ: ಸಂಬಂಧಿತ ಕಾನೂನುಗಳ ಅಡಿಯಲ್ಲಿ ಒದಗಿಸಲಾದ ಯಾವುದೇ ವ್ಯಾಪಾರ, ವ್ಯವಹಾರ ಅಥವಾ ವೃತ್ತಿಯನ್ನು ಮುಂದುವರಿಸಲು ಸೂಕ್ತ ಪರವಾನಗಿ.
11. ರೂ.200ರ ಮುಖಬೆಲೆಯ ಛಾಪಾ ಕಾಗದದಲ್ಲಿ ಕಾರ್ಯಗತಗೊಳಿಸಿದ ವಿದ್ಯುತ್ ಸರಬರಾಜು ಒಪ್ಪಂದವು ಅರ್ಜಿದಾರರಲ್ಲಿ ಲಭ್ಯವಿದೆ ಮತ್ತು ಅದನ್ನೇ ಆನ್‌ಲೈನ್‌ನಲ್ಲಿ ಅಪ್‌ಲೋಡ್ ಮಾಡಲಾಗುತ್ತದೆ.
12. ಮೇಲೆ ಉಲ್ಲೇಖಿಸಲಾದ ವಿವಿಧ ಹಂತಗಳಲ್ಲಿ ಸೂಚಿಸಲಾದ ಅನ್ವಯವಾಗುವ ದಾಖಲೆಗಳು / ಪ್ರಮಾಣಪತ್ರಗಳು ನನ್ನೊಂದಿಗೆ ಲಭ್ಯವಿದೆ ಮತ್ತು ಯಾವುದೇ ಸಮಯದಲ್ಲಿ ಪರವಾನಿಗೆದಾರರು ಪರಿಶೀಲಿಸಬಹುದು. ಮುಂದುವರೆದು, ಸ್ಥಾಪನದ ಸೇವೆಯ ದಿನಾಂಕದಿಂದ 30 ದಿನಗಳೊಳಗೆ ಆನ್‌ಲೈನ್ ಅರ್ಜಿ ವೇದಿಕೆಯಲ್ಲಿ ಈ ದಾಖಲೆಗಳನ್ನು ಒದಗಿಸಲು / ಅಪ್‌ಲೋಡ್ ಮಾಡಲು ನಾನು ಒಪ್ಪುತ್ತೇನೆ. ಅದೇ ರೀತಿ ಹೇಳಿದ ದಾಖಲೆಗಳು / ಪ್ರಮಾಣಪತ್ರಗಳನ್ನು ಒದಗಿಸಲು ವಿಫಲವಾದರೆ, ಸಲ್ಲಿಕೆ / ಪರಿಶೀಲನೆಗೆ ನನ್ನ ಕಡೆಯಿಂದ ಹಿಂಜರಿಕೆ ಇದ್ದಲ್ಲಿ, ಇಂತಹ ವೈಫಲ್ಯದ ಕಾರಣದಿಂದಾಗಿ, ಪರವಾನಿಗೆದಾರರು ನೀಡಲಾದ ವಿದ್ಯುತ್ ಸರಬರಾಜು ಸಂಪರ್ಕವನ್ನು ಕಡಿತಗೊಳಿಸಬಹುದು.
13. ಯಾವುದೇ ಬಾಹ್ಯ ಸರ್ಕಾರಿ ಸಂಸ್ಥೆ, ನ್ಯಾಯಾಂಗ ವೇದಿಕೆ ಅಥವಾ ಅಂತಹ ಮಾಹಿತಿಯನ್ನು ಬಯಸುವ ಯಾವುದೇ ಇತರೆ ಪ್ರಾಧಿಕಾರದ ಕೋರಿಕೆಗೆ ಅನುಗುಣವಾಗಿ ಪರವಾನಿಗೆದಾರರಿಗೆ ಮೇಲಿನ ಯಾವುದೇ ಅನ್ವಯವಾಗುವ ದಾಖಲೆಗಳ ಪ್ರತಿಯನ್ನು ನಾನು ಒದಗಿಸುತ್ತೇನೆ.
14. ನನ್ನ ಕೈಗಾರಿಕೆ / ವ್ಯಾಪಾರವು ಯಾವುದೇ ಸರ್ಕಾರಿ ಸಂಸ್ಥೆಯಿಂದ ಅಪಾಯಕಾರಿ / ಮಾಲಿನ್ಯಕಾರಕವನ್ನು ಬಿಡುಗಡೆ ಮಾಡುವುದಾಗಿ ಘೋಷಿಸಲಾಗಿಲ್ಲ ಮತ್ತು ನನ್ನ ಕೈಗಾರಿಕೆ / ವ್ಯಾಪಾರವನ್ನು ನಡೆಸುವ ಮೂಲಕ ಅಥವಾ ಯಾವುದೇ ವಿದ್ಯುತ್ ಸಂಪರ್ಕವನ್ನು ನೀಡುವ ಮೂಲಕ ಯಾವುದೇ ನ್ಯಾಯಾಲಯ ಅಥವಾ ನ್ಯಾಯಾಂಗ ಪ್ರಾಧಿಕಾರದ ಯಾವುದೇ ಆದೇಶಗಳನ್ನು ಉಲಂಘಿಸಲಾಗುವುದಿಲ್ಲ. ಈ ಕಾರಣದಿಂದಾಗಿ ಅರ್ಜಿದಾರರಿಂದ ಉಂಟಾಗುವ ಯಾವುದೇ ನಷ್ಟದ ವಿರುದ್ಧ ಪರವಾನಿಗೆದಾರರಿಗೆ ಪರಿಹಾರದ ರಕ್ಷಣೆಯ ಖಾತ್ರಿ ನೀಡಲಾಗುತ್ತದೆ.

15. ಹೊಸ ವಿದ್ಯುತ್ ಸಂಪರ್ಕವನ್ನು ಚಾಲನೆಗೊಳಿಸುವ ಸಮಯದಿಂದಲೇ, ಆವರಣಕ್ಕೆ ವಿದ್ಯುತ್ ಸರಬರಾಜು ಮಾಡುವ ಸ್ಥಳದಿಂದ ಮತ್ತು ಆವರಣದಲ್ಲಿ ವಿದ್ಯುತ್ ಕಾಮಗಾರಿಗಳಲ್ಲಿನ ಯಾವುದೇ ದೋಷದಿಂದಾಗಿ, ಯಾವುದೇ ಗಾಯ ಅಥವಾ ಘಟನೆ ಸಂಭವಿಸಿದಲ್ಲಿ, ಎಸ್ಕಾಂ ಮತ್ತು / ಅಥವಾ ಅದರ ಉತ್ತರಾಧಿಕಾರಿಗಳು ಮತ್ತು / ಅಥವಾ ಉದ್ಯೋಗಿಗಳಿಗೆ ನಷ್ಟ ಪರಿಹಾರವನ್ನು ನೀಡಲು ಮತ್ತು ನಷ್ಟವನ್ನುಂಟು ಮಾಡದೇ ಇರಲು ಅರ್ಜಿದಾರನು ಒಪ್ಪುತ್ತಾನೆ, ಯಾವುದೇ ದೋಷಪೂರಿತ / ದೋಷಯುಕ್ತ / ಕಳಪೆ ಗುಣಮಟ್ಟದ ವೈರಿಂಗ್ / ಸ್ಥಾಪನೆಯ ಕಾರಣದಿಂದಾಗಿ ಆವರಣದಲ್ಲಿ ಅಥವಾ ಆವರಣಕ್ಕೆ ವಿದ್ಯುತ್ ಸರಬರಾಜು ಮಾಡುವ ಸ್ಥಳದಿಂದ ಸಂಭವಿಸುವ ಯಾವುದೇ ಅಪಘಾತ ಅಥವಾ ಘಟನೆಗೆ ಎಸ್ಕಾಂ ಜವಾಬ್ದಾರರಾಗಿರುವುದಿಲ್ಲ / ಹೊಣೆಗಾರರಾಗಿರುವುದಿಲ್ಲ. ಅಂತಹ ಘಟನೆ ಸಂಭವಿಸಿದಾಗ, ಅಂತಹ ಸ್ಥಾಪನೆಗೆ ಸರಬರಾಜನ್ನು ಮುಂದುವರಿಸುವುದು ಜೀವ ಅಥವಾ ಆಸ್ತಿಗೆ ಅಪಾಯವಾಗಿದ್ದರೆ, ಎಸ್ಕಾಂ ಅರ್ಜಿದಾರರಿಗೆ ಒದಗಿಸಲಾದ ವಿದ್ಯುತ್ ಸರಬರಾಜನ್ನು ಕಡಿತಗೊಳಿಸಬಹುದು. ದೋಷಪೂರಿತ ಸ್ಥಾಪನವನ್ನು ಸರಿಪಡಿಸಿದ ನಂತರ ಮತ್ತು ಪರವಾನಿಗೆ ಪಡೆದ ವಿದ್ಯುತ್ ಗುತ್ತಿಗೆದಾರ / ಸೂಕ್ತ ಪ್ರಾಧಿಕಾರದಿಂದ ಪರೀಕ್ಷಾ ವರದಿಯನ್ನು ಸಲ್ಲಿಸಿದ ನಂತರವೇ ಅಂತಹ ಕಡಿತಗೊಂಡ ಸರಬರಾಜನ್ನು ಮರುಸಂಪರ್ಕಗೊಳಿಸಲಾಗುತ್ತದೆ.
16. ಅರ್ಜಿದಾರನು, ತನ್ನ ಆವರಣದಲ್ಲಿನ ದೋಷಯುಕ್ತ ವಿದ್ಯುತ್ ಕಾಮಗಾರಿ / ವೈರಿಂಗ್ ನಿಂದಾಗಿ ಎಸ್ಕಾಂನ ಆಸ್ತಿಗೆ ಹಾನಿ / ದೋಷ ಸಂಭವಿಸಿದೆ ಎಂಬುದಕ್ಕೆ ಸಾಕಷ್ಟು ಪುರಾವೆಗಳಿದ್ದಲ್ಲಿ, ಅಂತಹ ಕಾಮಗಾರಿಗಳ ದುರಸ್ಥಿ / ಬದಲಿಸುವಿಕೆಗೆ ತಗಲುವ, ವೆಚ್ಚವನ್ನು ಭರಿಸಲು ಒಪ್ಪುತ್ತಾನೆ.
17. ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ, ಕಾರ್ಯಕ್ಷಮತೆ ನಿಬಂಧನೆಗಳ ಮಾನದಂಡಗಳಲ್ಲಿ (Standards of Performance) ನಿರ್ದಿಷ್ಟಪಡಿಸಿದಂತೆ ಯಾವುದೇ ಬಲವಂತದ (Force majeure) ಘಟನೆಗಳು / ವಿನಾಯಿತಿಗಳ ಕಾರಣದಿಂದಾಗಿ ಸಂಪರ್ಕವನ್ನು ನೀಡುವಲ್ಲಿ ಅಥವಾ ಸಂಪರ್ಕವನ್ನು ನೀಡಿದ ನಂತರ ಕಾರ್ಯಕ್ಷಮತೆಯ ಯಾವುದೇ ಮಾನದಂಡಗಳನ್ನು ಪೂರೈಸುವಲ್ಲಿನ ವಿಳಂಬಕ್ಕೆ ಅರ್ಜಿದಾರನು ಎಸ್ಕಾಂ ಅನ್ನು ಹೊಣೆಗಾರನನ್ನಾಗಿ ಮಾಡುವುದಿಲ್ಲ.
18. ಪರವಾನಿಗೆದಾರರ ವಿದ್ಯುತ್ ದರ ಪಟ್ಟಿಯಲ್ಲಿ ನಿಗದಿಪಡಿಸಿದ ದರಗಳಲ್ಲಿ ವಿದ್ಯುತ್ ಬಳಕೆಯ ಬಿಲ್ಲುಗಳು ಮತ್ತು ಇತರ ಎಲ್ಲಾ ಶುಲ್ಕಗಳನ್ನು ಪಾವತಿಸುವುದು ಹಾಗೂ ಸರಬರಾಜಿಗಾಗಿ ಕಾಲಕಾಲಕ್ಕೆ ಜಾರಿಯಲ್ಲಿರುವಂತಹ ವಿವಿಧ ಶುಲ್ಕಗಳನ್ನು ನಿಯಮಿತವಾಗಿ ಮತ್ತು ಸರಿಯಾದ ಸಮಯಕ್ಕೆ ಪಾವತಿಸುವುದು.

19. ಪರವಾನಿಗೆದಾರರು ಹೇಳಿದಂತೆ ಒಂದು ವೇಳೆ ಸ್ವಯಂ ಕಾರ್ಯನಿರ್ವಹಿತ ಕಾಮಗಾರಿ ಮಾಡಿದರೆ ಮೊದಲ ವಿದ್ಯುತ್ ಬಿಲ್ಲಿನಲ್ಲಿ ಅಂದಾಜು ವೆಚ್ಚದ ಶೇ.10 ರಷ್ಟು ಮೇಲ್ವಿಚಾರಣಾ ಶುಲ್ಕವನ್ನು ಭರಿಸುವುದು.

20. ಸರಬರಾಜು ಷರತ್ತುಗಳು (ಸಿಒಎಸ್), ಆರ್‌ಒಇ ಮತ್ತು ಆಯೋಗದ ಚಾಲ್ತಿಯಲ್ಲಿರುವ ಆದೇಶಗಳು / ವಿನಿಯಮಗಳು, ನಿರ್ದೇಶನಗಳು ಮತ್ತು ನಿಬಂಧನೆಗಳ ಆಧಾರದ ಮೇಲೆ ಕಾಲಕಾಲಕ್ಕೆ ತಿದ್ದುಪಡಿ ಮಾಡಿರುವ ಸಂಬಧಿತ ವಿನಿಯಮಗಳ ಪ್ರಕಾರ ಭದ್ರತಾ ಠೇವಣಿಗಳು, ಹೆಚ್ಚುವರಿ ಭದ್ರತಾ ಠೇವಣಿಗಳು ಮತ್ತು ಮೂಲಸೌಕರ್ಯ ಅಭಿವೃದ್ಧಿಯೆಡೆಗೆ ಇತರೆ ಯಾವುದೇ ಶುಲ್ಕಗಳು, ಯಾವುದಾದರೂ ಇದ್ದರೆ, ಠೇವಣಿ ಇಡುವುದು.

21. ವಿದ್ಯುಚ್ಛಕ್ತಿ ಅಧಿನಿಯಮ 2003 ರ ನಿಬಂಧನೆಗಳು, ಕಾಲಕಾಲಕ್ಕೆ ಅನ್ವಯವಾಗುವಂತೆ ಆಯೋಗವು ಸೂಚಿಸುವ ಅನ್ವಯವಾಗುವ ಎಲ್ಲಾ ಕಾನೂನುಗಳು, ಸರಬರಾಜಿನ ಷರತ್ತುಗಳು / ವಿದ್ಯುತ್ ದರ ಆದೇಶಗಳು ಮತ್ತು ಇತರೆ ಯಾವುದೇ ವಿನಿಯಮಗಳು ಅಥವಾ ನಿಬಂಧನೆಗಳನ್ನು ಪಾಲಿಸುವುದು.

22. ಒಪಂದದ ಅವಧಿ ಮುಗಿಯುವ ಮೊದಲು ಯಾವುದಾದರೂ ಸಂದರ್ಭದಲ್ಲಿ ಒಪಂದವನ್ನು ಮುಕ್ತಾಯಗೊಳಿಸಿದಲ್ಲಿ ಅಥವಾ ಆಯೋಗದ ನಿಬಂಧನೆಗಳು / ವಿನಿಯಮಗಳು / ಆದೇಶಗಳು / ನಿರ್ದೇಶನಗಳ ಅವಕಾಶಗಳ ಪ್ರಕಾರ ಯಾವುದೇ ಒಪಂದದ ಉಪೇಕ್ಷೆಯ ಸಂದರ್ಭದಲ್ಲಿ, ಅರ್ಜಿದಾರರು ಪಾವತಿಸಿದ ಗ್ರಾಹಕ ಭದ್ರತಾ ಠೇವಣಿಯನ್ನು ಪಾವತಿಸಬೇಕಾದ / ಬಾಕಿ ಇರುವ ವಿದ್ಯುತ್ ಬಳಕೆ ಶುಲ್ಕದ ಜೊತೆಗೆ ಇತರೆ ಯಾವುದೇ ಶುಲ್ಕಗಳನ್ನು ಸರಿಹೊಂದಿಸಲು ಪರವಾನಿಗೆದಾರರು ಸ್ವಾತಂತ್ರ್ಯ ಹೊಂದಿರುತ್ತಾರೆ.

23. ಅವನ / ಅವಳ ಹೆಸರಿನಲ್ಲಿ ಮತ್ತು / ಅಥವಾ ಮೇಲೆ ತಿಳಿಸಿದ ಆವರಣದಲ್ಲಿ ವಿದ್ಯುಚ್ಛಕ್ತಿ ಬಳಕೆಗೆ ಸಂಬಂಧಿಸಿದಂತೆ ಯಾವುದೇ ಬಾಕಿ ಅಥವಾ ಸಂಬಂಧಿತ ಶುಲ್ಕಗಳು ಬಾಕಿ ಉಳಿದಿರುವುದಿಲ್ಲ. ಮೊದಲೇ ಅಸ್ತಿತ್ವದಲ್ಲಿರುವ ಯಾವುದೇ ಹೊಣೆಗಾರಿಕೆಯನ್ನು ಗಮನದಲ್ಲಿಟ್ಟುಕೊಂಡು ಅರ್ಜಿದಾರ / ಗ್ರಾಹಕ ನೀಡಿದ ಮೇಲಿನ ಘೋಷಣೆ / ಜವಾಬ್ದಾರಿಯು ಸುಳ್ಳು ಎಂದು ಕಂಡುಬಂದಲ್ಲಿ, ಅರ್ಜಿದಾರ / ಗ್ರಾಹಕರು ಅಂತಹ ಮೊತ್ತವನ್ನು ಉದ್ದೇಶಪೂರ್ವಕವಾಗಿ ಅಡ್ಡಿಮಾಡದೆ ಪಾವತಿಸಬೇಕು. 60 ದಿನಗಳ ಅವಧಿಯಲ್ಲಿ, ಆವರಣದ ಅಥವಾ ಖಾತೆ ಸಂಖ್ಯೆಗೆ ಸಂಬಂಧಿಸಿದಂತೆ, ಯಾವುದಾದರೂ ಬಾಕಿ ಇದ್ದರೆ, ಅದನ್ನು ನಿರ್ಧರಿಸುವಾಗ ಮತ್ತು / ಅಥವಾ ಗುರುತಿಸುವಾಗ ಗ್ರಾಹಕ / ಅರ್ಜಿದಾರನು ಎಸ್ಕಾಂಗೆ ಸಂಪೂರ್ಣ ಸಹಕಾರವನ್ನು ನೀಡಲು / ವಿಸ್ತರಿಸಲು

ಬದ್ಧನಾಗಿರಬೇಕು. ಮೇಲೆ ಹೇಳಿದ ಬಾಕಿಯನ್ನು ಬೇಡಿಕೆಯ ಮೇರೆಗೆ ಅರ್ಜಿದಾರನು / ಗ್ರಾಹಕನು ತಕ್ಷಣವೇ ಪಾವತಿಸಬೇಕು.

24. ಕಾಲಕಾಲಕ್ಕೆ ತಿದ್ದುಪಡಿ ಮಾಡಿದಂತೆ ಕರ್ನಾಟಕ ರಾಜ್ಯದಲ್ಲಿನ ವಿತರಣಾ ಪರವಾನಿಗೆದಾರರ ವಿದ್ಯುತ್ ಸರಬರಾಜು ಷರತ್ತುಗಳು ಮತ್ತು ಕಾರ್ಯಕ್ಷಮತೆ ನಿಬಂಧನೆ (Standards of Performance) 2004ರ ಮಾನದಂಡಗಳ ಪ್ರಕಾರ ಅಥವಾ, ಅರ್ಜಿದಾರನು ವಿತರಣಾ ಪರಿವರ್ತಕವನ್ನು ಒದಗಿಸಲು ಬೇಕಾದ ಜಾಗವನ್ನು ಒಳಗೊಂಡು, ಮಾಪಕ / ವಿದ್ಯುತ್ ಉಪಕರಣಗಳ ಸ್ಥಾಪನೆಗೆ ಸೂಕ್ತವಾದ ಮತ್ತು ಪರವಾನಿಗೆದಾರರಿಗೆ ಲಭ್ಯವಿರುವಂತೆ ಸಾಕಷ್ಟು ಜಾಗವನ್ನು ಒದಗಿಸಬೇಕು.
25. ಮಾಪಕ ಓದುವಿಕೆ ಮತ್ತು ಅದರ ಪರಿಶೀಲನೆ, ಇತ್ಯಾದಿಗಾಗಿ ಮಾಪಕಗಳಿಗೆ ಸ್ಪಷ್ಟ ಮತ್ತು ಅಡಚಣೆಯಿಲ್ಲದ ಪ್ರವೇಶವನ್ನು ಅನುಮತಿಸಬೇಕು.
26. ಯಾವುದೇ ಅಪಾವತಿ ಸಂದರ್ಭದಲ್ಲಿ, ಶಾಸನಬದ್ಧ ನಿಬಂಧನೆಗಳನ್ನು ಪಾಲಿಸದಿದ್ದಲ್ಲಿ ಮತ್ತು ಅಂತಹ ಆದೇಶವನ್ನು ಜಾರಿಗೆ ತರಲು ಶಾಸನಬದ್ಧ ಪ್ರಾಧಿಕಾರ (ಗಳು) ಕಾನೂನುಬದ್ಧವಾಗಿ ನಿರ್ದೇಶಿಸುವ ಸಂದರ್ಭದಲ್ಲಿ, ಅರ್ಜಿದಾರರು ಸೇವಾ ಸಂಪರ್ಕವನ್ನು ಉಲ್ಲೇಖದಡಿಯಲ್ಲಿ ಕಡಿತಗೊಳಿಸಲು ಪರವಾನಿಗೆದಾರರಿಗೆ ಅವಕಾಶವನ್ನು ನೀಡಬೇಕು. ಸಂಪರ್ಕ ಕಡಿತಗೊಂಡ ದಿನಾಂಕದಂದು ಅದರ ಪಾವತಿಯನ್ನು ಪಡೆಯುವುದು ಸೇರಿದಂತೆ ಪರವಾನಿಗೆದಾರರ ಇತರೆ ಯಾವುದೇ ಹಕ್ಕುಗಳಿಗೆ ತೊಂದರೆ ನೀಡದೇ ಸಂಪರ್ಕವನ್ನು ಕಡಿತಗೊಳಿಸಲು ಅವಕಾಶವನ್ನು ನೀಡಬೇಕು.
27. ವಿದ್ಯುತ್ ಸಂಪರ್ಕವನ್ನು ಕೋರಿರುವ ಅರ್ಜಿದಾರರ ಆವರಣವು ಮೊಟ್ಟಮೊದಲ ಬಾರಿಗೆ ವಿದ್ಯುತ್ ಸಂಪರ್ಕವನ್ನು ಪಡೆಯುತ್ತಿರುವ ಪ್ರದೇಶದ ವ್ಯಾಪ್ತಿಯಲ್ಲಿ ಇರುವುದಿಲ್ಲ. ಆವರಣದ ಹತ್ತಿರದಲ್ಲಿ ಲಭ್ಯವಿರುವ ಮೂಲದಿಂದ 500 ಮೀಟರ್ ಗಿಂತ ಹೆಚ್ಚು ದೂರವಿದ್ದಲ್ಲಿ ಅಂತಹ ಒಂದು ಪ್ರದೇಶ / ಸ್ಥಳವನ್ನು ಮೊಟ್ಟಮೊದಲ ಬಾರಿಗೆ ವಿದ್ಯುತ್ ಸಂಪರ್ಕವನ್ನು ಪಡೆಯುತ್ತಿರುವ ಪ್ರದೇಶವೆಂದು ಪರಿಗಣಿಸಲಾಗುತ್ತದೆ.
28. ಅರ್ಜಿದಾರರು ನೀಡಿದ ಮೇಲಿನ ಎಲ್ಲಾ ಘೋಷಣೆಯನ್ನು ಪರವಾನಗಿದಾರರು ಮತ್ತು ಅರ್ಜಿದಾರರ ನಡುವಿನ ಒಪ್ಪಂದದಂತೆ ನಿರ್ಣಯಿಸಲಾಗುತ್ತದೆ.

ಅರ್ಜಿದಾರರ ಸಹಿ

**ಅರ್ಜಿದಾರರ ಹೆಸರು**

ಈ ಕೆಳಗಿನ ಸಾಕ್ಷಿಗಳ ಸಮ್ಮುಖದಲ್ಲಿ

ಸಹಿ ಮಾಡಲಾಗಿದೆ ಮತ್ತು ನೀಡಲಾಗಿದೆ

ಸಾಕ್ಷಿಯ ಹೆಸರು